


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SK NEWS ಕನ್ನಡ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಹೊಸಮನಿ

Editor : MARUTI BASAVANTAPPA HOSAMANI

Cell : +91 97413 19119

Volume : 06 Issue : 206 Wednesday 03-01-2024 E-mail : maruti.b.hosamani76@gmail.com Page: 4 Price : Rs. 1/-


## ಕರವೇ ಕಾರ್ಯಕರ್ತರನ್ನು ಬಿಡುಗಡೆ ಗೊಳಿಸುವಂತೆ ಸಿ.ಎಂ.ಗೆ ಒತ್ತಾಯಿಸುವಂತೆ ಡಾ.ಎನ್.ಟಿ.ಶ್ರೀನಿವಾಸ್ ಶಾಸಕರಿಗೆ ಮನವಿ



ಕೂಡ್ಲಿಗಿ : ವಿಜಯನಗರ ಜಿಲ್ಲೆಯ ಕೂಡ್ಲಿಗಿ ಪಟ್ಟಣದಲ್ಲಿ ಡಾಕ್ಟರ್ ಎನ್ ಟಿ ಶ್ರೀನಿವಾಸ್ ಶಾಸಕರಿಗೆ ಕರವೇ ಕಾರ್ಯಕರ್ತರು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಟಿ.ಎ ನಾರಾಯಣಗೌಡರ ಹಾಗೂ ಕಾರ್ಯಕರ್ತರು ಬಂಧನವನ್ನು ಖಂಡನೆಯವಾದದ್ದು ಎಂದು ಕೂಡ್ಲಿಗಿಯ ಕರವೇ ತಾಲೂಕ ಅಧ್ಯಕ್ಷರಾದ ಕಾಟೇರ್ ತಿಳಿಸುವುದರೊಂದಿಗೆ ಹಾಲೇಶ್ ನೇತೃತ್ವದಲ್ಲಿ ಶಾಸಕರಿಗೆ ಮನವಿ ಸಲ್ಲಿಸಿದ ಸಂರ್ಭದಲ್ಲಿ ಡಿಸೆಂಬರ್ 27.ರಂದು ಬೆಂಗಳೂರಿನಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ( ಸಾದಳ್ಳಿ ಗೇಟ್ ) ಬಳಿಯಿಂದ ಕಬ್ಬನ್ ಪಾರ್ಕ್ ವರೆಗೂ ಬೃಹತ್ ಜನಜಾಗೃತಿ ಪ್ರತಿಭಟನೆ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರಿಂದ ಕನ್ನಡ ಬಳಸಿ,ಇಲ್ಲವೇ ಕರ್ನಾಟಕ ಬಿಟ್ಟು ತೊಲಗಿ, ಎಂಬ ಘೋಷಣೆಗಳೊಂದಿಗೆ ಅಂಗಡಿ ಮುಂಗಟ್ಟುಗಳ ಹೆಸರುಗಳು ಕನ್ನಡದಲ್ಲಿ ಇರಬೇಕು,ಉದ್ಯಮಿಗಳಿಗೆ ವ್ಯಾಪಾರಸ್ಥರು ನಿಮಗಿದು ಕೊನೆಯ ಎಚ್ಚರಿಕೆ, ಎಂಬ ನಾಮ ಫಲಕವನ್ನು ಹಿಡಿದು ಕೊಂಡು ಸಾವಿರಾರು ಕಾರ್ಯಕರ್ತರು ಕನ್ನಡ,ನಾಡು ನುಡಿ, ಜಲದ ಬಗ್ಗೆ ಹೋರಾಟ ಮಾಡುತ್ತಿರುವ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರು ಹಾಗೂ ಕಾರ್ಯಕರ್ತರನ್ನೂ ಶೀಘ್ರದಲ್ಲೇ ಬಿಡುಗಡೆ ಮಾಡಬೇಕು ಎಂಬ ಕುರಿತು ಸಿಎಂ ಅವರಿಗೆ ಒತ್ತಡ ಹಾಕುವಂತೆ ಶಾಸಕರಿಗೆ ಕೂಡ್ಲಿಗಿ ತಾಲೂಕಾ ಘಟಕ ಕರವೇ ಕಾರ್ಯಕರ್ತರು ಮನುವಿ ನೀಡಲಾಯಿತು.

ಈ ಸಂದರ್ಭದಲ್ಲಿ ಮನವಿ ಸ್ವೀಕರಿಸಿದ ಶಾಸಕರು ಮಾತನಾಡಿ ಮಾನ್ಯ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ರವರ ಬಳಿ ಚರ್ಚಿಸುವುದಾಗಿ ಎಂದು ತಿಳಿಸಿದರು, ಕನ್ನಡಪರ ಹೋರಾಟಗಾರರ ಬಿಡುಗಡೆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆಂದು ಕೂಡ್ಲಿಗಿ ತಾಲೂಕಿನ ಕರವೇ ಕಾರ್ಯಕರ್ತರಿಗೆ ಸಂದರ್ಭದಲ್ಲಿ ತಿಳಿಸಿದರು, ಈ ಸಂದರ್ಭದಲ್ಲಿ ಕರವೇ ತಾಲೂಕಾ ಪ್ರಧಾನ ಕಾರ್ಯದರ್ಶಿಯಾದ ರಾಘವೇಂದ್ರ ಸಾಲುಮನೆ, ತಾಲೂಕಾ ಯುವ ಘಟಕದ ಅಧ್ಯಕ್ಷ ಓಬಳೇಶ್,ತಾಲೂಕು ಉಪಾಧ್ಯಕ್ಷ ಕೆ. ನಾಗರಾಜ್ ಗುಡೆಕೋಟೆ ಗ್ರಾಮ ಘಟಕದ ಅಧ್ಯಕ್ಷ ಶಿವಕುಮಾರ್,ಯುವ ಘಟಕ ಪ್ರಧಾನ ಕಾರ್ಯದರ್ಶಿ ಕಾಶಿನಾಥ್, ಯುವ ಘಟಕ ಉಪಾಧ್ಯಕ್ಷ ಮಹಮದ್ ತೊಪಿಕ್,ನಿರ್ಕಲ್ ಪ್ವರ ಅಜ್ಜಯ್ಯ, ಜಿ.ರಾಜ ,ಗೌಡ್ರು ಶರಣಪ್ಪ, ಇದ್ದರು.

**ಜಿಲ್ಲಾ ವರದಿಗಾರರು : ರಾಘವೇಂದ್ರ.ಬಿ.ಸಾಲುಮನೆ. ಕೂಡ್ಲಿಗಿ**

## ಪ್ರತಿಮಾ ಹಾಸನ್‌ಗೆ ಕುವೆಂಪು ವಿಶ್ವ ಮಾನವ ಕನ್ನಡ ರತ್ನ ಪ್ರಶಸ್ತಿ



ಮೈಸೂರು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,ಮೈಸೂರು. ಮತ್ತು ಶ್ರೀ ಕೊಟ್ಟೂರು ಬಸವೇಶ್ವರ ಸೇವಾ ಟ್ರಸ್ಟ್, ಸಂಯುಕ್ತ ಆಶ್ರಯದಲ್ಲಿ ನಡೆಯಿತು . ರಾಷ್ಟ್ರಕವಿ ಕುವೆಂಪುರವರ ಜನ್ಮದಿನದ ಆಚರಣೆ. ಮತ್ತು ಕವಿ ಗೋಷ್ಠಿಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು , ವಿಜಯನಗರ ಒಂದನೇ ಹಂತ ಇಲ್ಲಿ ಏರ್ಪಡಿಸಿದ್ದರು .31:12:2023 ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಕೊಡ ಮಾಡಲಾದ ಕುವೆಂಪು ವಿಶ್ವ ಮಾನವ ಕನ್ನಡ ರಾಜ್ಯ ಪ್ರಶಸ್ತಿಗೆಯನ್ನು ಹಾಸನ ನಗರದ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ರವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಮತ್ತು ಕವನ ವಾಚನಕ್ಕೂ ಸನ್ಮಾನಿಸಿ ಗೌರವಿಸಲಾಯಿತು. ಇವರು ಶಿಕ್ಷಕಿಯಾಗಿದ್ದು, ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾಗಿದ್ದು.ವಿವಿಧ ಕ್ಷೇತ್ರದ ಸಂಘ ಸಂಸ್ಥೆಗಳ ಮಹಿಳಾ ಜಿಲ್ಲಾಧ್ಯಕ್ಷರು ಆಗಿ, ರಾಜ್ಯ ಮಟ್ಟದ ಪದಾಧಿಕಾರಿಗಳು ಆಗಿ ಹಲವಾರು ಸಂಸ್ಥೆಯ ಕಾರ್ಯಕರ್ತೆಯಾಗಿ ,ಇನ್ನೂ ಹಲವು ಸಂಸ್ಥೆಗಳ ಸದಸ್ಯರು ಆದ ಇವರು ಬಹುಮುಖ ಪ್ರತಿಭೆಯಾಗಿ , ಸದಾ ಕ್ರಿಯಾಶೀಲರಾದ ಶ್ರೀಮತಿ ಹೆಚ್, ಎಸ್, ಪ್ರತಿಮಾ ಹಾಸನ್ ರವರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರ್ ಇಲ್ಲಿ " ವಿಶ್ವ ಮಾನವ ಕನ್ನಡ ರತ್ನ ಪ್ರಶಸ್ತಿ "ನೀಡಿ ಸನ್ಮಾನಿಸಲಾಯಿತು . ಪ್ರಶಸ್ತಿಯನ್ನು ಇವರ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ, ಸಾಂಸ್ಕೃತಿಕ, ಇವರ ಎಲ್ಲಾ ಕ್ಷೇತ್ರದ ಕಾರ್ಯದ ಕ್ರಿಯಾಶೀಲತೆಯನ್ನು ಗಮನಿಸಿ ಮತ್ತು , ಪತ್ರಕರ್ತೆಯಾಗಿ , ಅಂಕಣಗಾರ್ತಿಯಾಗಿ, ಸಾಮಾಜಿಕ ಚಿಂತಕಿಯಾಗಿ, ತನ್ನದೇ ಆದಂತಹ ಸಮಾಜ ಸೇವೆಯನ್ನು ಸಲ್ಲಿಸುತ್ತಿರುವುದನ್ನು ಗಮನಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು .

ಕಾರ್ಯಕ್ರಮದಲ್ಲಿ ಕಾರ್ಯಕ್ರಮದ ಸಂಯೋಜಕರಾದಂತಹ ಶಿವಕುಮಾರ್, ಡಾ. ಸಿಪಿ ಕೃಷ್ಣಕುಮಾರ್, ಕುವೆಂಪು ವಿಶ್ವ ವಿದ್ಯಾಲಯ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದೇಗೌಡ, ಸತೀಶ್ ಜವರೇಗೌಡ. ತ್ಯಾಗರಾಜು. ಇನ್ನೂ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

## ದಿಢೀರನೆ ಶಾಲೆಗೆ ಭೇಟಿ ನೀಡಿ ಹೊಸ ವರ್ಷದ ಶುಭಾಶಯಗಳು ಕೋರಿದ ಶಾಸಕರು



ಕೂಡ್ಲಿಗಿ : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದಲ್ಲಿ 14.ನೇ ವಾರ್ಡಿನಲ್ಲಿ ಬರುವಂತಹ ಡಾ.ಬಿ.ಆರ್ ಅಂಬೇಡ್ಕರ್ ಶಾಲೆಗೆ ಜನಪ್ರಿಯ ಶಾಸಕರಾದ ಡಾಕ್ಟರ್ ಎನ್ ಟಿ ಶ್ರೀನಿವಾಸ್ ರವರು ದಿಢೀರ್ ಭೇಟಿಕೊಟ್ಟು ಅಂಬೇಡ್ಕರ್ ನಗರದ ಶಾಲೆಯ ಮಕ್ಕಳಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಹೊಸ ವರ್ಷದ ಶುಭಾಶಯಗಳು ತಿಳಿಸುವುದರೊಂದಿಗೆ ಶಾಲಾ ಮಕ್ಕಳನ್ನು ಮಾತನಾಡಿಸುವುದರೊಂದಿಗೆ ಮುಖ್ಯ ಗುರುಗಳಾದ ಲಕ್ಷ್ಮಿದೇವಿ ಹಾಗೂ ಸಿಬ್ಬಂದಿ ವರ್ಗದವರಿಗೆ ಶಿಕ್ಷಣದ ಪ್ರಗತಿ ಬಗ್ಗೆ ಮಾಹಿತಿ ಪಡೆಯುವುದರೊಂದಿಗೆ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಂತೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಪಕ್ಕದಲ್ಲಿರು ವಂತಹ ಶೌಚಾಲಯ ಹಾಗೂ ಕಸದ ತಿಪ್ಪೆಗಳನ್ನು ಕಂಡು ಶಾಸಕರು ಗರಂ ಆಗಿ

ಸ್ಥಳಕ್ಕೆ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿಗಳು ಫಿರೋಜ್ ಖಾನ್ ಹಾಗೂ ಗೀತಾ ಇವರನ್ನು ಕರೆಸಿ ಸ್ವಚ್ಛತೆ ಗೊಳಿಸುವಂತೆ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸೈನಿಕರಾದ ಎಚ್. ರಮೇಶ್ ಪೌರ ಕಾರ್ಮಿಕರ ಅಧ್ಯಕ್ಷರಾದ ರಾಜ್ಯಾಧ್ಯಕ್ಷರಾದಂತ ಕೆ ಪ್ರಭಾಕರ್, ವಕೀಲರು ಡಿ.ಎಚ್ ದುರ್ಗೇಶ್, ಕಾಂಗ್ರೆಸ್ ಮುಖಂಡರಾದ ಕಾವಲಿ ಶಿವಪ್ಪ ನಾಯಕ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರಾದಂತಹ ಗುರುಸಿದ್ದನಗೌಡ್ರು, ಜಿಂಕಲ್ ನಾಗವಣಿ, ಮಾದಿಗ ದಂಡರ ತಾಲೂಕ ಅಧ್ಯಕ್ಷರಾದ ಕೆ. ಮಹೇಶ್ ಹೆಗ್ಡಾಳ್, ಡಿ.ಎಚ್ ಮರಿಸ್ವಾಮಿ, ಶಾಮಿಯಾನ ಚಂದ್ರಪ್ಪ, ಜೆ. ರವಿ, ಇದ್ದರು.

**ಜಿಲ್ಲಾ ವರದಿಗಾರರು: ರಾಘವೇಂದ್ರ.ಬಿ.ಸಾಲುಮನೆ ಕೂಡ್ಲಿಗಿ**

## ಸರಳ ಸಜ್ಜನಿಕೆಯ ಸಾಕಾರ ಮೂರ್ತಿ ಶ್ರೀ ಸಿದ್ದೇಶ್ವರರು: ವಿ.ವೈ.ಪತ್ತಾರ



ಇಂಡಿ : ಅತ್ಯಂತ ಸರಳ ಸಜ್ಜನಿಕೆಯ ಸಾಕಾರ ಮೂರ್ತಿ, ನನ್ನದು–ತನ್ನದೆಂಬ ಮಮಕಾರ ತೊರೆದ ಮಹಾ ಪುರುಷರೇ ಶ್ರೀ ಸಿದ್ದೇಶ್ವರ ಸ್ವಾಮಿಗಳವರು, ಇವರು ಸಂತರಷ್ಟೇ ಅಲ್ಲ ಜ್ಞಾನೋಪಾಸಕರು ಕೂಡ ಆಗಿದ್ದರು ಎಂದು ಶಾಲಾ ಮುಖ್ಯ ಶಿಕ್ಷಕಿ ವಿ ವೈ ಪತ್ತಾರ ಹೇಳಿದರು.

ಅವರು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ಶ್ರೀ ಸಿದ್ದೇಶ್ವರ ಮಹಾ ಸ್ವಾಮಿಗಳ ಗುರು ನಮನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಶ್ರೀಗಳು ಪ್ರವಚನದ ಮೂಲಕ ಜನರಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗುತ್ತಿದ್ದರು. ಗಹನವಾದ ವೇದಾಂತ ತತ್ವಗಳನ್ನು ಅತ್ಯಂತ ಸರಳವಾಗಿ ಜನ ಮಾನಸದಲ್ಲಿ ಉಳಿಯುವಂತೆ ವಿವರಿಸುವುದೇ ಅವರ ವೈಶಿಷ್ಟ್ಯ ಎಂದು ಹೇಳಿದರು.

ಶಿಕ್ಷಕಿ ಎಸ್ ಡಿ ಬಿರಾದಾರ ಮಾತನಾಡಿ, ಸಿದ್ದೇಶ್ವರರ ಮಾತು ಎಂದರೆ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಬಲು ಪ್ರೀತಿ. ಆತ ಮಹಾ ಬುದ್ಧಿವಂತ, ಆಧ್ಯಾತ್ಮಿಕದಂತೆ ಲೌಕಿಕ ವಿಷಯಗಳಲ್ಲೂ ವಿಶೇಷ ಪರಿಜ್ಞಾನವಿದೆ. ಮುಂದೆ ಜಗತ್ತಿಗೇ ದೊಡ್ಡವನಾಗುತ್ತಾನೆ ಎಂದು ವಿಶ್ವಾಸ ದಿಂದ ಎಲ್ಲರೆದುರು ಹೇಳುತ್ತಿದ್ದರು ಎಂದು ತಿಳಿಸಿದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ,ಶ್ರೀ ಸಿದ್ದೇಶ್ವರ ಶ್ರೀಗಳು ಸರಳವಾದ ಸ್ಪೂರ್ತಿದಾಯಕ ಜೀವನ ಶೈಲಿಯನ್ನು ಹೊಂದಿದ್ದರು. ಅವರ ಸರಳತೆ, ಸಹಾನುಭೂತಿ, ಯೋಗದ ಮನೋಭಾವಗಳು, ಬದುಕಿನ ಸಮಸ್ಯೆಗಳಿಗೆ ಸೃಜನಶೀಲ ವಿಧಾನಗಳು ಮನುಕುಲಕ್ಕೆ ದಾರಿ ದೀಪವಾಗಿವೆ ಎಂದು ಹೇಳಿದರು.

ಶಿಕ್ಷಕರಾದ ಎಸ್ ಎಂ ಪಂಚಮುಖಿ,ಎಸ್ ಬಿ ಕುಲಕರ್ಣಿ, ಜೆ ಸಿ ಗುಣಕಿ,ಎಸ್ ಎನ್ ಡಂಗಿ, ಯಲ್ಲಮ್ಮ ಸಾಲೋಟಗಿ, ಸಂತೋಷ ಬಿರಾದಾರ ಸೇರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು: ಶಿವಪ್ಪ.ಬಿ.ಹರಿಜನ.ಇಂಡಿ**

## ಶಿಲ್ಪಕಲೆಗೆ ಜಕಣಾಚಾರಿ ಕೊಡುಗೆ ಅನನ್ಯ: ಸಂತೋಷ ಬಂಡೆ




ಇಂಡಿ : ಭಾರತೀಯ ಶಿಲ್ಪಕಲೆಗೆ ಜಕಣಾಚಾರಿ ಅವರ ಕೊಡುಗೆ ಅನನ್ಯ. ಕನ್ನಡ ಶಿಲ್ಪಕಲೆಯ ಪರಂಪರೆಯನ್ನು ಶ್ರೀಮಂತ ಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಬೇಲೂರು ಹಳೇ ಬೀಡಿನಲ್ಲಿ ಕಲ್ಲಿನಿಂದ ಶಿಲ್ಪ ಕಲೆಯನ್ನು ಕೆತ್ತಿ ಇಡೀ ವಿಶ್ವವೇ ವೀಕ್ಷಿಸುವಂತೆ ಮಾಡಿದ್ದಾರೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಅವರು ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನವನ್ನು ಉದ್ದೇಶಿಸಿ ಮಾತನಾಡಿದರು.

ಕರ್ನಾಟಕವು ಶಿಲ್ಪ ಕಲೆಯ ತವರೂರು. ಬೇಲೂರು, ಹಳೇಬೀಡು, ಸೋಮನಾಥಪುರ ಮತ್ತಿತರ ಕಡೆಗಳಲ್ಲಿ ಕೆತ್ತಿರುವ ಅಮರ ಶಿಲ್ಪಿ ಜಕಣಾಚಾರಿ ಅವರ ಶ್ರೇಷ್ಠ ಕೆತ್ತನೆಗಳೇ ಇದಕ್ಕೆ ಸಾಕ್ಷಿ. ಸಾಹಿತ್ಯ, ಸಂಗೀತ, ನಾಟ್ಯ, ವಾಸ್ತು ಶಿಲ್ಪವು ಭಾರತೀಯ ಸಂಸ್ಕೃತಿಯ ಪ್ರತೀಕ. ವಾಸ್ತು ಶಿಲ್ಪ ಕಲೆಯನ್ನು ಅಜರಾಮರ ಗೊಳಿಸಿದ ಕೀರ್ತಿ ಜಕಣಾಚಾರಿ ಅವರಿಗೆ ಸಲ್ಲುತ್ತದೆ. ಹಾಗಾಗಿ ಅವರನ್ನು ಸ್ಮರಿಸುವುದು, ಗೌರವಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಶಿಕ್ಷಕ ಎಸ್ ಎಸ್ ಅರಬ ಮಾತನಾಡಿ, ನಾಡಿನ ಐತಿಹಾಸಿಕ ವಾಸ್ತು ಶಿಲ್ಪ ಪರಂಪರೆಗೆ ಶಿಲ್ಪಗಳ ಕೊಡುಗೆ ಅಪಾರವಾದುದು. ಅಂತಹ ಶಿಲ್ಪ ಕಲೆಯ ಕೊಡುಗೆಯನ್ನು

ತನ್ನ ಕಲಾ ಕೌಶಲ್ಯದ ಮೂಲಕ ನಾಡಿಗೆ ನೀಡಿ ಅಜರಾಮರ ನಾದವನು ಅಮರ ಶಿಲ್ಪಿ ಜಕಣಾಚಾರಿ ಎಂದು ಹೇಳಿದರು.

ಶಾಲಾ ಮುಖ್ಯ ಶಿಕ್ಷಕ ಎ ಎಂ ಬೆದ್ರೇಕರ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಡಿನ ಇತಿಹಾಸದಲ್ಲಿ ಹೊಯ್ಸಳರು ತಮ್ಮದೇ ಆದ ಕೊಡುಗೆಯನ್ನು ಶಿಲ್ಪ ಕಲೆಗೆ ನೀಡಿದ್ದಾರೆ. ವಿಷ್ಣುವರ್ಧನ ಕಾಲದಲ್ಲಿ ಕಲೆಯು ಉತ್ತುಂಗ

ಶಿಖರದಲ್ಲಿತ್ತು. ಇತಿಹಾಸದ ಗತ ಕಾಲದಲ್ಲಿ ಬೇಲೂರು, ಹಳೇಬೀಡು, ಚನ್ನಕೇಶವ ದೇವಾಲಯ ಇನ್ನೂ ಅನೇಕ ಕಡೆ ಅಮರ ಶಿಲ್ಪ ಜಕಣಾಚಾರಿಯವರು ಶಿಲ್ಪ ಕಲೆಗಳನ್ನು ಕೆತ್ತನೆ ಮಾಡಿ ಹೆಸರುವಾಸಿಯಾಗಿ,ಅಮರ ಶಿಲ್ಪಿ ಎನಿಸಿಕೊಂಡಿದ್ದಾರೆ ಎಂದು ಹೇಳಿದರು.

ಶಿಕ್ಷಕಿ ಎಸ್ ಪಿ ಪೂಜಾರಿ ಕಾರ್ಯಕ್ರಮ ನಿರ್ವಹಿಸಿದರು.

ಶಾಲಾ ಮಕ್ಕಳು ಭಾಗವಹಿಸಿದ್ದರು.

**ಜಿಲ್ಲಾ ವರದಿಗಾರರು: ಶಿವಪ್ಪ.ಬಿ.ಹರಿಜನ.ಇಂಡಿ**

## ಎಂ.ಪಿ. ಚುನಾವಣೆಗೆ ನಾನು ಆಕಾಂಕ್ಷಿ ಜಿ.ಪಂ. ಮಾಜಿ ಅಧ್ಯಕ್ಷ: ಶಿವಕುಮಾರ




ಮುಧೋಳ: 2024ರ ಲೋಕಸಭಾ ಚುನಾವಣೆಗೆ ಬಾಗಲಕೋಟೆಯಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲು ನಾನು ಪ್ರಬಲ ಆಕಾಂಕ್ಷಿಯಾಗಿದ್ದು ಈ ಸಲವಾದರೂ ಮುಧೋಳ ತಾಲ್ಲೂಕಿಗೆ ಅವಕಾಶ ನೀಡಬೇಕು. ಎಂದು ಜಿ.ಪಂ. ಮಾಜಿ ಅಧ್ಯಕ್ಷ ಶಿವಕುಮಾರ ಮಲಘಾಣ ಹೇಳಿದರು.

ಮಂಗಳವಾರ ಕಾ.ನಿ.ಪ ಕಾರ್ಯಾಲಯದಲ್ಲಿ ಮಾತನಾಡಿದ ಅವರು ಮುಧೋಳ ವಿಧಾನಸಭಾ ಕ್ಷೇತ್ರ ಎಸ್.ಸಿ ಮೀಸಲು ಕ್ಷೇತ್ರವಾಗಿದ್ದರಿಂದ ಇತರೆ ರಾಜಕಿಯ ಮುಖಂಡರಿಗೆ ರಾಜಕೀಯವಾಗಿ ಮುಂದೆ ಬರಲು ಅವಕಾಶ ಇಲ್ಲವಾಗಿದೆ, 1989ರಲ್ಲಿ ಕೇವಲ ಒಂದು ಸಲ ಸ್ಪರ್ಧಿಸಲು ಅವಕಾಶ ನೀಡಿದ್ದು ಅಂದಿನಿಂದ ಇಲ್ಲಿಯವರೆಗೆ ಅವಕಾಶ ಸಿಕ್ಕಿಲ್ಲ. ಉಳಿದೆಲ್ಲ ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾಗಲು ಅವಕಾಶ ಇದ್ದು ಇಲ್ಲಿ ಅವಕಾಶ ಇಲ್ಲವಾಗಿದೆ. ಆದರೆ ನಮ್ಮ ತಾಲ್ಲೂಕಿನ ಜನ ಎರಡೂ ಪಕ್ಷದಿಂದ ಆಯ್ಕೆಯಾಗಿ ಹೋದ ಶಾಸಕರು ಕ್ಯಾಬಿನೆಟ್ ದರ್ಜೆಯ ಮಂತ್ರಿ ಹಾಗೂ ಉಪಮುಖ್ಯ ಮಂತ್ರಿಯವರೆಗೆ ಹೋದರು ನಮ್ಮವರೆಂಬ ಭಾವನೆಯಿಂದ ಸಹಕಾರ ನೀಡುತ್ತಾ ಬಂದಿದ್ದು ಈ ಸಲವಾದರೂ ಅವಕಾಶ ನೀಡಿದ್ದೇಯಾದರೆ ಕಾಂಗ್ರೆಸ್ ಪಕ್ಷದಿಂದ ಸಾಮಾನ್ಯದವರು ಸಂಸತ್ ಭವನದತ್ತ ಹೋಗಲು ಎಲ್ಲ ರೀತಿಯ ತಯಾರಿ ನಾವು ಮಾಡಿಕೊಂಡಿದ್ದೇವೆ. ಎಂದು ಅವರು ಹೇಳಿದರು.

ನಾನು ತಾಲ್ಲೂಕಾ ಕಾಂಗ್ರೆಸ್ ಹಾಗೂ ಪಿಎಲ್‌ಡಿ ಬ್ಯಾಂಕ್, ತಾಪಂ. ಈಪಂ. ಅಧ್ಯಕ್ಷರಾಗಿ ಎರಡು ಭಾರಿ ಅಧಿಕಾರ ವಹಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಜಿಲ್ಲೆಯ ಪ್ರವಾಸ ಮಾಡಿ ಶೈಕ್ಷಣಿಕ, ಕೃಷಿ, ನೈರ್ಮಲ್ಯ, ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇವೆಯನ್ನು ಒದಗಿಸಿಕೊಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿ ಅಭಿವೃದ್ಧಿ ಪರ ಕಾರ್ಯದಲ್ಲಿ ತೊಡಗಿದ್ದರಿಂದ ಇಲ್ಲಿಯವರೆಗೂ ನನ್ನ ಪರ ಜನರು ಕಾರ್ಯ ಮಾಡುತ್ತಾರೆ. ಎಂಬ ನಂಬಿಕೆ ನನಗೆ ಇದೆ ಈಗಾಗಲೆ ನಾನು ಭೂತಮಟ್ಟದಿಂದ ತಯಾರಿ ನಡೆಸಿದ್ದು ಜಿಲ್ಲಾ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಾಂಗ್ರೆಸ್ ಮುಖಂಡರ ಜೊತೆಗೆ ಮಾತುಕತೆ ನಡೆಸಿ ಅವಕಾಶಕ್ಕಾಗಿ ವಿನಂತಿ ಮಾಡಿದ್ದೇನೆ. ಎಂದು ಅವರು ಹೇಳಿದರು.

ಕಾಂಗ್ರೆಸ್ ಮುಖಂಡ ಗಿರೀಶ ಲಕ್ವಾಣಿ, ರೈತ ಮುಖಂಡ ಪಾಂಡಪ್ಪ ಮಂಟೂರ ಮಾತನಾಡಿ ಸರ್ವಜನಾಂಗದವರ ಜೊತೆಗೆ ಸ್ನೇಹಿತರಂತ ವ್ಯಕ್ತಿತ್ವವನ್ನು ಹೊಂದಿರುವ ಶಿವಕುಮಾರಗೆ ಲೋಕಸಭಾ ಕಾಂಗ್ರೆಸ್ ಟಿಕೇಟ ನೀಡಬೇಕು. ಬಾಗಲಕೋಟೆಯ ಸರ್ವಾಂಗೀನ ಅಭಿವೃದ್ಧಿಗಾಗಿ ಅವರ ಸೇವೆ ಜಿಲ್ಲೆಗೆ ಅತ್ಯವಶ್ಯಕವಾಗಿದೆ. ಸಿ.ಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ರಾಜ್ಯ ಮತ್ತು ಜಿಲ್ಲೆಯ ಎಲ್ಲ ಮುಖಂಡರಿಗೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇವೆ ಎಂದರು.

ಈ ಸಂದರ್ಭದಲ್ಲಿ ಚಿದಾನಂದ ಪಾಟೀಲ್, ಸುರೇಶ ಅಂಕಲಗಿ ಇದ್ದರು.

## ಶಿಕ್ಷಣ ಸಚಿವ ಮಧು ಬಂಗಾರಪ್ಪ ರಾಜಿನಾಮೆ ನೀಡಬೇಕೆಂದು: ಎಂ.ಬಿ.ವ್ಹಿ.ಪಿ.ಯಿಂದ ಪ್ರತಿಭಟನೆ

ಇಂಡಿ : ಪಟ್ಟಣದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿಕೊಂಡು ಶಿಕ್ಷಣ ಸಚಿವ ಮಧು ಬಂಗಾರಪ್ಪ ರವರ ರಾಜೀನಾಮೆಗೆ ಒತ್ತಾಯಿಸಿ ಎಬಿವಿಪಿ ಸಂಘಟನೆಯಿಂದ ಬೃಹತ್ ಪ್ರತಿಭಟನೆ ಮಾಡುತ್ತಾ ಶಿಕ್ಷಣವೆಂದರೆ 'ಮಾನವೀಯತೆಯ ವಿಕಾಸ, ಮನುಷ್ಯರಲ್ಲಿ ಪರಿ ಪೂರ್ಣತೆಯನ್ನು ತುಂಬುವುದೇ ಶಿಕ್ಷಣ, ಮನುಷ್ಯನ ವ್ಯಕ್ತಿತ್ವ ಶಿಕ್ಷಣದಿಂದ ಹೊರ ಬರುತ್ತದೆ ಎಂದು ವಿವೇಕಾನಂದರು ಹೇಳುತ್ತಿದ್ದರು, 'ಭಾರತದ ಎಲ್ಲ ಸಮಸ್ಯೆಗಳಿಗೂ ಶಿಕ್ಷಣ ಒಂದೇ ಪರಿಹಾರ ಎಂದು docteger wate her woor green owestetast mes seperti asing pigeon water as Doradiant ಜನ ಪ್ರತಿನಿಧಿಗಳ ನ್ಯಾಯಾಲಯ ಶಿಕ್ಷೆ ವಿಧಿಸಿದ್ದರು ಸಹಿತ ರಾಜ್ಯ ಸರ್ಕಾರದ ಮಂತ್ರಿಗಳಾಗಿ ಮುಂದುವರೆದಿರುವುದು ವಿಷಾದನೀಯ .ಈ ಕೂಡಲೇ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸುತ್ತದೆ.

ಖಾಸಗಿ ಆಡಿಯೋ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮಧು ಬಂಗಾರಪ್ಪ 2011 ರಲ್ಲಿ ರಾಜೇಶ ಎಕ್ಸಪೋರ್ಟ್ ಸಂಸ್ಥೆಗೆ 66 ಕೋಟಿ ರೂ ಚೆಕ್ ನೀಡಿದ್ದರು. ಆದರೆ ಆ ಚೆಕ್ ಬೌನ್ಸ್ ಆಗಿತ್ತು ಈ ಹಿನ್ನಲೆಯಲ್ಲಿ ಮಧು ಬಂಗಾರಪ್ಪ ವಿರುದ್ಧ ದೂರು ದಾಖಲಿಸಿತ್ತು ಈ ನಡುವೆ ಮಧು ಬಂಗಾರಪ್ಪಗೆ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯವು 196 ಕೋಟಿ ರೂ ದಂಡ ವಿಧಿಸಿದ್ದು, ಒಂದು ವೇಳೆ ದಂಡ ಪಾವತಿಸದಿದ್ದರೆ 6 ತಿಂಗಳು ಸೆರೆವಾಸ ಅನುಭವಿಸಲು ನ್ಯಾಯಾಲಯ ಆದೇಶಿಸಿದೆ. ಈ ರೀತಿ ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯು ರಾಜ್ಯದ ಶಿಕ್ಷಣ ಇಲಾಖೆಗೆ ಕಪ್ಪು ಚುಕ್ಕೆ, ಇವರು ಈ ಇಲಾಖೆಯನ್ನು ಹೇಗೆ ನಿಭಾಯಿಸಲು ಸಾಧ್ಯ? ತಕ್ಷಣವೇ ರಾಜ್ಯದ ಮುಖ್ಯಮಂತ್ರಿಗಳು ಅವರ ರಾಜೀನಾಮೆ ಪಡೆಯ ಬೇಕೆಂದು ಎಬಿವಿಪಿ ಆಗ್ರಹಿಸಿ ಇಂದು ಮಾನ್ಯ ತಹಶೀಲ್ದಾರ ಇವರಿಗೆ ಮನವಿಯನ್ನು ಸಲ್ಲಿಸಿದರು.

**ಜಿಲ್ಲಾ ವರದಿಗಾರರು:ಶಿವಪ್ಪ.ಬಿ.ಹರಿಜನ.ಇಂಡಿ**

# ಬೆಳೆಗಳ ಸಮೀಕ್ಷೆಗಾಗಿ ರೈತರ ಮೊಬೈಲ್ ಆಪ್ ಬಿಡುಗಡೆ

ಬಾಗಲಕೋಟೆ : ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಲ್ಲಿ ಒಂದಾದ ಬೆಳೆ ಸಮೀಕ್ಷೆ ಕಾರ್ಯಕ್ರಮದಡಿ ತಾವು ಬೆಳೆದ ಬೆಳೆಯನ್ನು ದಾಖಲಿಸಲು ರೈತರಿಗಾಗಿಯೇ ಮೊಬೈಲ್ ಆಪ್ ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯಕ್ರಮ ಪ್ರಾರಂಭವಾಗಿದ್ದು, ಈ ಯೋಜನೆ ಅನ್ವಯ ಜಿಲ್ಲೆಯ ರೈತರು ತಮ್ಮ ಜಮೀನಿನ ಸರ್ವೆ ನಂಬರ್, ಹಿಸ್ಸಾ ನಂಬರ್‌ವಾರು ತಾವು ಬೆಳೆದ ಕೃಷಿ ಬೆಳೆ, ಬಹುವಾರ್ಷಿಕ ತೋಟಗಾರಿಕೆ, ಅರಣ್ಯ ಹಾಗೂ ಇತರೆ ಬೆಳೆ ಮಾಹಿತಿ ಛಾಯಾ ಚಿತ್ರ ಸಹಿತ ರೈತರು ಅಂಡ್ರ್ಯಾಯಿಡ್ ಮೊಬೈಲ್ ಮೂಲಕ ದಾಖಲಿಸಬಹುದಗಿದೆ. ಗೂಗಲ್ ಪ್ಲೇಸ್ಟೋರ್ ನಲ್ಲಿ https://play.google.com/store /apps/details?id=com.sk.farmer23_ 24.cropsurv ey ಲಿಂಕ್ ಬಳಸಿ ಹಿಂಗಾರು ಬೆಳೆ ಸಮೀಕ್ಷೆ 2023 ಆಪ್‌ನ್ನು ಡೌನ್‌ಲೋಡ್ ಮಾಡಿಕೊಂಡು ಸ್ವತಃ ಬೆಳೆ ಮಾಹಿತಿಯನ್ನು ದಾಖಲಿಸಬಹುದಾಗಿದೆ. ಬೆಳೆ ಸಮೀಕ್ಷೆಯ ದತ್ತಾಂಶವನ್ನು ಕೃಷಿ, ತೋಟಗಾರಿಕೆ, ರೇಷ್ಮೆ ಹಾಗು ಇನ್ನಿತರೆ ಬೆಳೆಗಳ ವಿಸ್ತೀರ್ಣ ಲೆಕ್ಕ ಹಾಕುವ ಕಾರ್ಯದಲ್ಲಿ, ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬೆಳೆ ಹಾನಿ ಕುರಿತು ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಸುವಲ್ಲಿ, ಬೆಳೆ ವಿಮಾ ಯೋಜನೆ ಅಡಿ ಸರ್ವೆ ನಂಬರ್‌ವಾರು ಬೆಳೆ ಪರಿಶೀಲನೆ ಹಾಗೂ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸರ್ವೆ ನಂಬರ್ ಆಯ್ಕೆ ಮಾಡಲು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಲು, ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆ ಅನುಷ್ಠಾನಕ್ಕಾಗಿ ಹಾಗೂ ಆರ್‌ಟಿಸಿಯಲ್ಲಿ ಬೆಳೆ ವಿವರ ದಾಖಲಾತಿಗಾಗಿ ಬಳಸಬಹುದಾಗಿದೆ.

ಜಿಲ್ಲೆಯ ರೈತ ಬಾಂಧವರು ಹಾಗೂ ವಿದ್ಯಾವಂತ ಯುವಕರು ತಪ್ಪದೇ ತಮ್ಮ ಜಮೀನಿನಲ್ಲಿರುವ ಬೆಳೆಗಳ ವಿವರವನ್ನು ದಾಖಲಿಸಬೇಕು.

ಇಲ್ಲವಾದಲ್ಲಿ ಸರ್ಕಾರದ ಯೋಜನೆಗಳಿಂದ ವಂಚಿತರಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಜಿಲ್ಲೆಯ ರೈತ ಬಾಂಧವರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಗ್ರಾಮದ ಕೃಷಿ ಸಖಿಯರು, ಬೆಳೆ ಸಮಿಕ್ಷೆಯ ಖಾಸಗಿ ನಿವಾಸಿಗಳು, ಕೃಷಿ ಇಲಾಖೆ, ಕಂದಾಯ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು : ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ 2023-24ನೇ ಸಾಲಿನ "ಸಂಯಮ ಪ್ರಶಸ್ತಿ"ಗೆ ಅರ್ಜಿ ಆಹ್ವಾನಿಸಿದೆ. ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ವಿಶಿಷ್ಠ ಸಾಧನೆ ಮಾಡಿರುವ ಸಾಧಕರು ಹಾಗೂ ಸಂಘ ಸಂಸ್ಥೆಗಳು 2024 ಜನವರಿ 15 ರೊಳಗೆ ಅರ್ಜಿ ಸಲ್ಲಿಸಬಹುದು.

ಅರ್ಜಿಯನ್ನು ಮೇಲ್ kar-temperance@gmail.com ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 6ನೇ ಮಹಡಿ, ಡಾ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು- 560001 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

# ಮಾತೃವಂದನಾ ಯೋಜನೆ:

## ಗರ್ಭಿಣಿ, ಬಾಣಂತಿಯರಿಗೆ ಸಹಾಯಧನ

ಬಾಗಲಕೋಟೆ : ಕೇಂದ್ರ ಪುರಸ್ಕೃತ ಮಿಷನ್ ಶಕ್ತಿ ಸಾಮರ್ಥ್ಯದಡಿ ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯಡಿ ತಾಯಿ ಮತ್ತು ಮಗುವಿನ ಆರೋಗ್ಯ ಮತ್ತು ಪೌಷ್ಠಿಕಾಂಶವನ್ನು ಸುಧಾರಿಸುವ ಉದ್ದೇಶದಿಂದ ಮೊದಲನೇ ಹೆರಿಗೆ ಗರ್ಭಿಣಿ, ಬಾಣಂತಿ ಮಹಿಳೆಯರಿಗೆ 5 ಸಾವಿರ ರೂ.ಗಳ ಸಹಾಯಧ 2 ಕಂತುಗಳಲ್ಲಿ ನೀಡಲಾಗುತ್ತಿದೆ. ಮೊದಲನೇ ಕಂತು 3 ಸಾವಿರ ರೂ, ಎರಡನೇ ಕಂತು ಮಗು ಜನನ ನಂತರ ಮೊದಲ ಹಂತದ ಚುಚ್ಚುಮದ್ದು ಪೂರ್ಣಗೊಂಡ ಮೇಲೆ 2 ಸಾವಿರ ರೂ.ಗಳ ಸಹಾಯಧನ ನೀಡಲಾಗುತ್ತದೆ.

ಎರಡನೇ ಹೆರಿಗೆಯಲ್ಲಿ ಹೆಣ್ಣು ಮಗು ಜನಿಸಿದಲ್ಲಿ ಮಾತ್ರ 6 ಸಾವಿರ ರೂ.ಗಳ ಪ್ರಯೋಜನವನ್ನು ಒಂದೇ ಕಂತಿನಲ್ಲಿ ನೀಡಲಾಗುವುದು. ಎರಡನೇ ಮಗುವಿಗೆ ಪಡೆಯುವದಕ್ಕಾಗಿ ಗರ್ಭಿಣಿ ಅವಧಿಯಲ್ಲಿ ಅಂಗನವಾಡಿ ಕೇಂದ್ರದಲ್ಲಿ ನೊಂದಣಿ ಮಾಡಿಸುವುದು ಕಡ್ಡಾಯವಾಗಿದೆ. ಸಹಾಯಧನ ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಯ ಆಧಾರ ಲಿಂಕ್ ಹೊಂದಿರುವ ಬ್ಯಾಮಕ್ ಖಾತೆಗೆ ವರ್ಗಾಯಿಸಲಾಗುತ್ತದೆ.

ಫಲಾನುಭವಿಗಳಿಗೆ ನೊಂದಣಿಗೆ ಬೇಕಾದ ದಾಖಲಾತಿಗಳು ಆಧಾರ ಕಾರ್ಡ ಪ್ರತಿ, ತಾಯಿ ಮತ್ತು ಶಿಶು ರಕ್ಷಣಾ ಕಾರ್ಡ ಕಡ್ಡಾಯ. ಇದರೊಂದಿಗೆ ಪಡಿತರ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ನರೇಗಾ ಕಾರ್ಡ, ಇ-ಶ್ರಮ ಕಾರ್ಡ, ಆಯುಷ್ಮಾನ್ ಕಾರ್ಡ ಇದರಲ್ಲಿ ಯಾವುದಾದರೊಂದು ನಕಲು ಪ್ರತಿ ಲಗತ್ತಿಸಿ ಅರ್ಜಿಯೊಂದಿಗೆ ಅಂಗನವಾಡಿ ಕೇಂದ್ರದಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕ ಪಟ್ಟದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸಂಪರ್ಕಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಅಮರೇಶ ಎಚ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಿಗ್ ಕಾರ್ಮಿಕರ ವಿಮಾ ಯೋಜನೆ

ಬಾಗಲಕೋಟೆ : ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಗೆ ಅರ್ಹ ಕಾರ್ಮಿಕರಿಂದ ಸೇವಾ ಸಿಂಧು ಪೋರ್ಟನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಸ್ವಿಗ್ಗಿ, ಜೊಮಾಟೋಗಳಂತ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್‌ಕಾರ್ಟ, ಪೋರ್ಟಲ್, ಫಾರ್ಮಸಿ, ಬ್ಲಿಂಕಿಟ್, ಜೆಪ್ಟೋ, ಬಿಗ್ ಬಾಸ್ಕೆಟ್, ಡಾಮಿನೋಜ್ ಮುಂತಾದ ಸಂಸ್ಥೆಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿಸಿಕೊಂಡ ಗಿಗ್ ಕಾರ್ಮಿಕರು ವಿಮೆಗೆ ನೊಂದಣಿ ಮಾಡಿಕೊಳ್ಳಬಹುದಾಗಿದೆ.

ಅಪಘಾತದಿಂದ ಮರಣ ಹೊಂದಿದಲ್ಲಿ 2 ಲಕ್ಷ ರೂ, ಹಾಗೂ ಜೀವಾ ವಿಮೆ 2 ಲಕ್ಷ ಸೇರಿ ಒಟ್ಟು 4 ಲಕ್ಷ, ಶಾಶ್ವತ ದುರ್ಬಲತೆ ಹೊಂದಿದಲ್ಲಿ 2 ಲಕ್ಷ, ಆಸ್ಪತ್ರೆ ವೆಚ್ಚ ಮರುಪಾವತಿಗೆ 1 ಲಕ್ಷ ಹಾಗೂ ಜೀವನ ವಿಮಾ 2 ಲಕ್ಷ ನೀಡಲಾಗುತ್ತದೆ. ನೊಂದಣಿ ಮಾಡುವ ಕಾರ್ಮಿಕರು 18 ರಇಂದ 60 ವರ್ಷದೊಳಗಿದ್ದು, ಆದಾಯ ತೆರಿಗೆ ಪಾವತಿದಾರರು ಆಗಿರಬಾರದು. ಭವಿಷ್ಯನಿಧಿ, ಇಪಿಎಫ್ ಹೊಂದಿರಬಾರದು. ಆಧಾರ ಸಂಖ್ಯೆ, ವೃತ್ತಿ ನಿರ್ವಹಿಸುತ್ತಿರುವ ಸಂಸ್ಥೆಗಳು ನೀಡಿದ ಗುರುತಿನ ಚೀಟಿ, ವೇತನ ಚೀಟಿ, ಬ್ಯಾಂಕ್ ಪಾಸ್‌ಬುಕ್, ಇ-ಶ್ರಮ ನೊಂದಣಿ ಸಂಖ್ಯೆ ಇಲ್ಲವಾದಲ್ಲಿ ನೊಂದಾಯಿಸಿ ಪಡೆದುಕೊಂಡು ನೊಂದಾಯಿಸುವಂತೆ ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಹಸ್ರಾರು ಭಕ್ತರ ನಡುವೆ ಸಂಪನ್ನಗೊಂಡ ಶ್ರೀಗುದ್ನೇಶ್ವರ ಪಂಚ ಕಳಸ ರಥೋತ್ಸವ



ಕುಕನೂರು : ಪಟ್ಟಣದಲ್ಲಿ ಶ್ರೀಗುದ್ನೇಶ್ವರ ಸ್ವಾಮಿಯ ಪಂಚ ಕಳಸ ಮಹಾ ರಥೋತ್ಸವವು ಸಹಸ್ರಾರು ಸದ್ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಪ್ರತಿವರ್ಷದಂತೆ ಈ ವರ್ಷವೂ ಸಹ ಹೋಸ್ತಿಲ ಹುಣ್ಣಿಮೆಯ ದಿನದಂದು ಸಾಯಂ ಕಾಲ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಆರಾಧ್ಯ ದೈವ ಶ್ರೀ ಗುದ್ನೇಶ್ವರ (ರುದ್ರ ಮುನೇಶ್ವರ) ಜಾತ್ರಾ ಮಹೋತ್ಸವ ಜರುಗಿತು. ಜಾತ್ರಾ ಮಹೋತ್ಸವ ದ ಮಹಾರಥೋತ್ಸವಕ್ಕೂ ಮುನ್ನ ಬೆಳಗಿನ ಬ್ರಾಹ್ಮಿ ಮುಹೂರ್ತದಿಂದ ಶ್ರೀಮಠದಲ್ಲಿ ವಿಧಾನಗಳನ್ನು ನೆರವೇರಿಸಲಾಯಿತು. ಸಾಯಂ ಕಾಲವಾಗುತ್ತಿದ್ದಂತೆ ಬಿನ್ನಾಳ ಗ್ರಾಮದಿಂದ ನಂದಿ ಕೋಲು ಸೇವೆ ಹಾಗೂ ಪಕ್ಕದಲ್ಲಿರುವ ಅಳಿಯಪ್ಪನ ಮಠ ಗ್ರಾಮದಿಂದ ಶ್ರೀ ಅಳಿಯ ಚೆನ್ನಬಸವೇಶ್ವರ ಭಜನಾ ಸಂಘದವರಿಂದ ಪಲ್ಲಕ್ಕಿ ಸೇವೆ ಆಗಮಿಸುತ್ತಿದ್ದಂತೆಯೇ ಶ್ರೀ ಸ್ವಾಮಿಯ ಪಂಚಕಳಸ ಮಹಾ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಪುರಾತನ ಕಾಲದಲ್ಲಿ ಶ್ರೀ ಗುದ್ನೇಶ್ವರ ಪವಾಡ ಕಥೆಗಳು ಅದ್ಭುತವಾಗಿದ್ದು ಅವುಗಳಲ್ಲಿ ಪ್ರಮುಖವಾದದ್ದು ಬೆಳಗಾಗುವುದರೊಳಗೆ 500ಕ್ಕೂ ಹೆಚ್ಚು ಎಕರೆ ಭೂ ಪ್ರದೇಶವನ್ನು ಶ್ರೀ ಗುದ್ನೇಶ್ವರರು ಬಿತ್ತನೆ ಮಾಡಿ ಪವಾಡ ಮಾಡಿದ್ದು ಆ ಕಾಲದಲ್ಲಿ ಬಿತ್ತಿದ ಬೀಜಗಳು ಬೃಹತ್ ಹುಣಸೆ ಮರವಾಗಿ ನಿಂತಿರುವುದನ್ನು ಇಂದಿಗೂ ಸಹ ಕಾಣಬಹುದಾಗಿದ್ದು ಗುದ್ನೆಪ್ಪನ ಮಠ ಪ್ರದೇಶದಲ್ಲಿ ಬೃಹದಾಕಾರವಾಗಿ ಬೆಳೆದ ಸಹಸ್ರಾರು ಹುಣಸೆ ಮರಗಳನ್ನು ಇಂದಿಗೂ ಸಹ ಕಾಣಬಹುದಾಗಿದೆ ಹಾಗೂ ರಾತ್ರೋರಾತ್ರಿ ಹುಣಸೆ ಮರ ಬಿತ್ತನೆಗೆ ಬಳಸಿದ ಬಸವಣ್ಣ (ಎತ್ತುಗಳು) ಕಲ್ಲಿನ ರೂಪ ಪ ' ಡ ' ದ ' ಂ ಸ್ಥಾಪಿತಗೊಂಡಿರುವುದನ್ನು ಇಂದಿಗೂ ಸಹ ದೇವಸ್ಥಾನದ ಆವರಣದಲ್ಲಿ ಕಾಣಬಹುದಾಗಿದೆ.

ಇನ್ನು ನವ ವಿವಾಹಿತ ಜೋಡಿಗಳು ತಪ್ಪದೇ ಶ್ರೀ ಗುಡ್ನೇಶ್ವರರ ಪಂಚಕಳಸ ರಥೋತ್ಸವದ ದರ್ಶನ ಪಡೆದು ಪಾವನರಾಗಬೇಕು ಎಂಬುದು ಇಲ್ಲಿನ ಜನರಲ್ಲಿ ಬೇರೂರಿದ ನಂಬಿಕೆಯಾಗಿದ್ದು ಈ ರೀತಿ ಪಂಚ ಕಳಸ ಮಹಾರಾತೋತ್ಸವದ ದರ್ಶನ ಪಡೆದ ದಂಪತಿಗಳು ಮುಂದಿನ ವರ್ಷ ರಥೋತ್ಸವದ ಒಳಗೆ ತಮ್ಮ ಸಂತಾನ ದೊಂದಿಗೆ ಆಗಮಿಸಿ ರಥೋತ್ಸವದ ದರ್ಶನ ಪಡೆಯುತ್ತಾರೆ. ಶ್ರೀ ಗುಡ್ನೇಶ್ವರ ಸ್ವಾಮಿಯ ದಯೆಯಿಂದ ಪಂಚ ಕಳಸ ದರ್ಶನ ಪಡೆದ ನವ ವಿವಾಹಿತರಿಗೆ ಸಂತಾನ ಭಾಗ್ಯ ದೊರೆಯುವುದು ನಿಶ್ಚಿತ ಎಂಬುದು ಜನತೆಯ ನಂಬಿಕೆಯಾಗಿದೆ. ಪಂಚ ಕಳಸ ಮಹಾ ರಥೋತ್ಸವಕ್ಕೆ ಆಗಮಿಸಿದ ಭಕ್ತವರ್ಗದವರು ತಮ್ಮ ಹರಕೆಗಳನ್ನು ಈಡೇರಿಸಿ ಮಹಾ ರಥೋತ್ಸವಕ್ಕೆ ಉತ್ತತ್ತಿ ಹಾಗೂ ಬಾಳೆಹಣ್ಣನ್ನು ಸಮರ್ಪಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.

## ಕುಷ್ಠರೋಗ ನಿಮೂಲನಾ ಕಾರ್ಯಕ್ರಮ ಉದ್ಘಾಟನೆ

# ಸ್ಪರ್ಶ ಜ್ಞಾನವಿಲ್ಲದ ತದ್ದು ಮಚ್ಚೆ ಇದ್ದರೆ ಕೂಡಲೇ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಿರಿ: ಡಾ. ಶಿವನಗೌಡ ಪಾಟೀಲ



ಬಾದಾಮಿ : ಸ್ಪರ್ಶ ಜ್ಞಾನವಿಲ್ಲದ ತದ್ದು ಮಚ್ಚೆ ಕಂಡು ಬಂದರೆ ಇದು ಕುಷ್ಟ ರೋಗದ ಲಕ್ಷಣವಿದ್ದು ಕೂಡಲೇ ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಕುಷ್ಠರೋಗ ಅಧಿಕಾರಿ ಡಾ.ಶಿವನಗೌಡ ಪಾಟೀಲ ಹೇಳಿದರು.

ಅವರು ತಾಲೂಕಿನ ಚಿಕ್ಕಮುಚ್ಚಳಗುಡ್ಡ ಗ್ರಾಮದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ(ಆರ್.ಎಂ.ಎಸ್.ಎ)ಯಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಹಾಗೂ ಆದರ್ಶ ವಿದ್ಯಾಲಯ ಚಿಕ್ಕ ಮುಚ್ಚಳಗುಡ್ಡ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನದ 2023 ಕಾರ್ಯಕ್ರಮವನ್ನು ಉದ್ಘಾಟಿಸಿ

ಮಾತನಾಡಿದರು. ತಾಲೂಕಾ ಆರೋಗ್ಯಾಧಿಕಾರಿ ಡಾ.ಎಂ.ಬಿ.ಪಾಟೀಲ ಕುಷ್ಟರೋಗದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮುಖ್ಯಶಿಕ್ಷಕ ರಾಮಚಂದ್ರ ಭಜಂತ್ರಿ ಅಧ್ಯಕ್ಷತೆ ವಹಿಸಿ ಮಾತನಾಡಿ ಕುಷ್ಠರೋಗ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ಸುನಂದಾ ಪಾಟೀಲ, ದೀಪಾ ಎಚ್, ರಾಕೇಶ್ ಬೊರನ್ನವರ, ರಾಜು ವಾಲಿ, ಬಸವ್ಮ ಗಾಡಗುಳಿ, ಪ್ರೇಮಾ ದಾನಕಸಿರೂರ ಸೇರಿದಂತೆ ಸಹಶಿಕ್ಷಕರು ಉಪಸ್ಥಿತರಿದ್ದರು. ಸಂಗಮೇಶ ಉಳಾಗಡ್ಡಿ ಸ್ವಾಗತಿಸಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ಎಚ್.ಮಹಾಲಿಂಗಪೂರ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಗಮೇಶ್ ಉಳ್ಳಾಗಡ್ಡಿ ಸ್ವಾಗತಿಸಿದರು. ಎನ್.ಎಸ್.ಚೌರಿ ನಿರೂಪಿಸಿದರು, ರಮೇಶ್ ಕತ್ತಿಕೈ ವಂದಿಸಿದರು.

# ಸರ್ವ ರೋಗ ನಿರ್ಣಯಕ್ಕೂ ನಾಡಿ ಪರೀಕ್ಷೆ ಅವಶ್ಯ: ಡಾ. ಸಂಜಯ್ ಸಿ.



ಬಾಗಲಕೋಟೆ : ವೈದ್ಯಕೀಯ ರಂಗದಲ್ಲಿ ಕಂಡು ಬರುವ ಹಲವು ರೋಗಗಳಿಗೂ ನಾಡಿ ಪರೀಕ್ಷೆ ಅತ್ಯವಶ್ಯಕವಾಗಿದೆ ಎಂದು ಡಾ. ಸಂಜಯ್ ಸಿ ತಿಳಿಸಿದರು.

ನಗರದ ಎಂಆರ್‌ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಜೀವನಾಡಿ ಪ್ರಾಯೋಗಿಕ ಕಾರ್ಯಗಾರದಲ್ಲಿ ಮುಂಬೈನ ಪ್ರಸಿದ್ಧ ನಾಡಿ ಪರೀಕ್ಷಾ ವೈದ್ಯರಾದ ಡಾ. ಸಂಜಯ್ ಸಿ ಮಾತನಾಡುತ್ತಾ ಭಾರತದ ಪ್ರಾಚೀನ ಆಯುರ್ವೇದಿಕ್ ಪದ್ಧತಿಯಲ್ಲಿ ಕಂಡುಬಂದಿರುವ ಈ ನಾಡಿ ಪರೀಕ್ಷಾ ವಿಧಾನವು ಬದುಕು ಹಾಗೂ ಮರಣವನ್ನು ಖಚಿತಪಡಿಸುತ್ತಲ್ಲದೆ ಸರ್ವರೋಗ ಅತಿ ಅವಶ್ಯಕವಾಗಿದೆ ಎಂದು ತಿಳಿಸಿದರು.

ಈ ನಾಡಿ ಪರೀಕ್ಷಾ ಕಾರ್ಯದಲ್ಲಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕ ಬಳಗ ಪಾಲ್ಗೊಂಡು ಜೀವನಾಡಿ ಪರೀಕ್ಷೆಯ ವಿಧಾನಗಳನ್ನು ಅರಿತಿದ್ದು ವಿಶೇಷವಾಗಿತ್ತು.

ಕಾರ್ಯಗಾರದ ನಿರೂಪಕರಾಗಿದ್ದ ಡಾ. ಸಂಜಯ್ ಸಿ ಅವರಿಗೆ ಕಾಲೇಜಿನ ಪರವಾಗಿ 'ಆಚಾರ್ಯ ಶರಂಗಧರ' ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು.

ಈ ಕಾರ್ಯಗಾರದಲ್ಲಿ ಕಾಲೇಜಿನ ಡೀನ್ ಆದ ಡಾ. ಶಿವಕುಮಾರ್ ಗಂಗಾಲ, ಪ್ರಾಂಶುಪಾಲರಾದ ಡಾ. ಪ್ರಲ್ಹಾದ್ ಗಂಗಾವತಿ, ಡಾ. ಈಶ್ವರ್ ಪಾಟೀಲ್, ಡಾ. ವಿಜಯಕುಮಾರ್ ಚವಡಿ, ಡಾ. ದೀಪಾ ಗಂಗಾಲ, ಡಾ, ವೀಣಾ ಕುಲಕರ್ಣಿ, ಡಾ. ರಜನಿ ದಡೆದ, ಡಾ. ರೇಖಾ ಸಕ್ಕರಿ, ಡಾ. ಅತಿರಾ ಸೋಮನ್, ಡಾ. ಸಂಜಯ್ ಚಿನಿವಾಲ್, ಡಾ. ಅಶ್ವಿನಿ ಹೊಸಮನಿ, ಸ್ವರ್ಣ ಮಂದಾರ ಸರ್ ಹಾಗೂ ಸಂಸ್ಥೆಯ ಇತರಿ ಸಿಬ್ಬಂದಿಗಳು ಹಾಜರಿದ್ದರು.

ಕಾರ್ಯಕ್ರಮವನ್ನು ಕುಮಾರಿ ಸಿದ್ಧಿ ನಿರೂಪಿಸಿದರು. ಕುಮಾರ್ ರೋಹನ್ ಕೆ ಸ್ವಾಗತಿಸಿದರು. ಕುಮಾರಿ ಐಶ್ವರ್ಯ ಮಾಗಡಿ ವಂದಿಸಿದರು.

# ಪ್ರಾರಂಭದಲ್ಲಿ ಕಷ್ಟರೋಗ ಪತ್ತೆ ಹಚ್ಚಲು ಸಹಕರಿಸಿ: ಡಾ. ಮಂಜುಳಾ ಗುರಾಣಿ



ಬಾದಾಮಿ : ದೇಹದಲ್ಲಿ ಯಾವುದಾದರೂ ತದ್ದು, ಮಚ್ಚೆ ಕಂಡು ಬಂದರೆ ಪ್ರಾರಂಭದಲ್ಲಿ ಕೂಡಲೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು ಎಂದು ವೈದ್ಯಾಧಿಕಾರಿ ಡಾ.ಮಂಜುಳಾ ಗುರಾಣಿ ಹೇಳಿದರು.

ಅವರು ನಗರದ ಶ್ರೀ ಬಸವೇಶ್ವರ ಪ್ರೌಢಶಾಲೆಯಲ್ಲಿ ಜಿಲ್ಲಾ ಆಡಳಿತ, ಜಿ.ಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕಾ ಆರೋಗ್ಯ ಮತ್ತು ಕುಟುಂಬ ಇಲಾಖೆ ಬಾದಾಮಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕುಷ್ಟರೋಗ ನಿರ್ಮೂಲನ ಕಾರ್ಯಕ್ರಮ ಮತ್ತು ಕುಷ್ಟರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕುಷ್ಟರೋಗ ಪತ್ತೆ ಹಚ್ಚುವ ಅಭಿಯಾನವನ್ನು ಡಿ.27 ರಿಂದ ಜ.11 ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಡಾ.ಅಕ್ಷಯ ಮೂಲಿಮನಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಆರ್.ಬಿ. ಹೊತಗಿ ಗೌಡ್ರ, ಮಾತನಾಡಿ ಕುಷ್ಟರೋಗ ಯಾವ ರೀತಿ ಬರುತ್ತದೆ, ಕುಷ್ಟರೋಗ ಲಕ್ಷಣಗಳೇನು ಇದರ ಕುರಿತು ಶಾಲಾ ಮಕ್ಕಳಿಗೆ ಉಪಯುಕ್ತ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರೌಢ ಶಾಲೆಯ ಮುಖ್ಯಾಧ್ಯಾಪಕ ಆರ್. ಆಯ್. ಅರಕೇರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಆದ್ಯತೆಯ ಮೇಲೆ ಎಲ್ಲ ಬೇಡಿಕೆ ಈಡೇರಿಕೆ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭರವಸೆ

ಬೆಳಗಾವಿ: ಗ್ರಾಮದ ಎಲ್ಲ ಬೇಡಿಕೆಗಳನ್ನೂ ಪರಿಗಣಿಸಿ ಆದ್ಯತೆಯ ಮೇಲೆ ಕಾರ್ಯಗತಗೊಳಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬಸುರ್ತೆ ಗ್ರಾಮಸ್ಥರಿಗೆ ಭರವಸೆ ನೀಡಿದರು.ಬೆಳಗಾವಿ ಗ್ರಾಮೀಣ ಕ್ಷೇತ್ರದ ಬಸುರ್ತೆ ಗ್ರಾಮಸ್ಥರು ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಂಗಳವಾರ ಪಾಲ್ಗೊಂಡು ಅವರು ಮಾತನಾಡಿದರು. ನಾನು ರಾಜ್ಯಕ್ಕೆ ಮಂತ್ರಿ ಇರಬಹುದು. ಆದರೆ ನಿಮ್ಮ ಮನೆ ಮಗಳು. ಮನೆ ಮಗಳಾಗಿ ನನ್ನ ಕರ್ತವ್ಯದ ಅರಿವು ನನಗಿದೆ. ನಿಮ್ಮಿಂದಾಗಿ ನಾನು ಈ ಸ್ಥಾನಕ್ಕೆ ಏರಲು ಸಾಧ್ಯವಾಗಿದೆ. ಹಾಗಾಗಿ ನಿಮ್ಮ ಋಣ ತೀರಿಸುವ ಕೆಲಸದಲ್ಲಿ ಹಿಂದಡಿ ಇಡುವ ಮಾತೇ ಇಲ್ಲ ಎಂದು ಹೆಬ್ಬಾಳಕರ್ ಭರವಸೆ ನೀಡಿದರು.

ಈ ಸಮಯದಲ್ಲಿ ಗ್ರಾಮದ ಹಿರಿಯರು, ಯುವರಾಜ ಕದಂ, ಬಸವಂತ ಬೆನಕೆ, ಸಂಜಯ್ ಗೋಜಗೆಕರ್, ರಮೇಶ್ ಗುಮಾತೆ, ಕೃಷ್ಣ ಪಾಟೀಲ, ಉಮೇಶ್ ನಾಯ್ಕ್, ರಾಜು ಭಾಂಡಗೆ, ರಘುನಾಥ್ ಖಂಡೇಕರ್, ಸುರೇಖಾ ಕೇಸರಕರ್, ಸಂಗೀತಾ ನಾಯ್ಕ್, ಲಕ್ಷ್ಮಣ ಡೊಂಗರೆ, ಶಿವಾಜಿ ನಾಯ್ಕ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.



**ವೀರಾಪುರ ಗ್ರಾಮದಿಂದ ಸುಮಾರು 40 ವರ್ಷಗಳಿಂದ ಶ್ರೀ ವೀರಭದ್ರೇಶ್ವರ ಸ್ವಾಮಿ ಮುಚಕಂಡಿ ಜಾತ್ರೆಗೆ ವೀರಪುರದಿಂದ ಪ್ರತಿ ವರ್ಷದಂತೆ ಈ ವರ್ಷ ಕೊಡ ಗ್ರಾಮದಿಂದ ಹಗ್ಗ ತೆಗೆದುಕೊಂಡು ಹೋಗುತ್ತಾರೆ ಮತ್ತು ಗ್ರಾಮದ ಸಮಸ್ತ ಗುರು ಹಿರಿಯರು ಯುವಕರು ಮಹಿಳೆರು ಚಿಕ್ಕ ಮಕ್ಕಳು ಸೇರಿಕೊಂಡು ಕಾಲ ನಡಿಗೆಯಲ್ಲಿ ಮುಚಕಂಡಿ ಶ್ರೀ ವೀರಭದ್ರೇಶ್ವರ ಸ್ವಾಮಿ ಜಾತ್ರೆಗೆ ಹೋಗುತ್ತಾರೆ.**

# ಮನಸ್ಸು ತಂಪುಗೊಳಿಸಲು ಶರಣರ ಸಂಘ ಅಗತ್ಯ



ರಬಕವಿ-ಬನಹಟ್ಟಿ : ಬದುಕಿನಲ್ಲಿ ಯಾವುದಕ್ಕೆ ಮಹತ್ವ ಕೊಡಬೇಕೆಂದು ಶರಣರು ಹೇಳಿ ಕೊಟ್ಟಿದ್ದಾರೆ. ನಮ್ಮ ಮನಸ್ಸು ತಂಪು ಮಾಡಲು ಶರಣರ ಸಂಘ ಅಗತ್ಯವಾಗಿದೆಯೆಂದು ಅಂಕಲಿ-ಕೈತನಾಳಮಠದ ಶ್ರೀ ಫಕೀರಜ್ಜ ಸ್ವಾಮೀಜಿ ಹೇಳಿದರು.

ನಗರದ ವೀರಭದ್ರೇಶ್ವವರ ಕಾರ್ತಿಕೋತ್ಸವ ಸಂದರ್ಭ ದೇವಸ್ಥಾನದ ಆವರಣದಲ್ಲಿ ಭಕ್ತವೃಂದಕ್ಕೆ ಆಶೀರ್ವಾದ ನೀಡಿ ಮಾತನಾಡಿದ ಅವರು, ಬಂಗಾರ, ಬೆಳ್ಳಿಯಿಂದ ಶೃಂಗಾರಗೊಂಡರೆ ಸಾಲದು ನಮ್ಮ ಆಚರಣೆ ಬಂಗಾರವಾಗಬೇಕು. ಚೆನ್ನಾಗಿ ಕೆಲಸ ಮಾಡುವುದೇ ಆಚಾರ, ಕೈ ಇರುವತನಕ ಚಂದದ ಕೆಲಸ ಮಾಡಿ. ಮಾತು ಬಲ್ಲವರು ಎಲ್ಲರ ಮನಸ್ಸು ಗೆಲ್ಲುವಂತೆ ಮಾತನಾಡಬೇಕೆಂದರು.

ಒಳ್ಳೆಯ ವಿಚಾರ ಆಲಿಸಿ, ನಮ್ಮಲ್ಲಿರುವ ಒಳ್ಳೆಯ ವಿಚಾರ ವ್ಯಕ್ತಪಡಿಸಬೇಕು. ಅಂದಾಗ ಮಾತ್ರ ಹೆಚ್ಚಿನ ಜ್ಞಾನ ಬರಲು ಸಾಧ್ಯವೆಂದರು.

ಶಿವು ಬಾಗೇವಾಡಿ, ಚನ್ನಪ್ಪ ಗುಣಕಿ, ಡಾ. ಪಿ. ವಿ. ಪಟ್ಟಣ, ಅಶೋಕ ಶೀಲವಂತ, ಮಲ್ಲಣ್ಣ ಬಾವಲತ್ತಿ , ಕಿರಣ ಆಳಗಿ, ಕಾಡಪ್ಪ ಪಟ್ಟಣ, ಶಿವಾನಂದ ಬುದ್ನಿ , ಚನಬಸಯ್ಯ ಮಠಪತಿ, ಲಿಂಗದ, ರಾಜು ಲುಕ್ಕ, ಮಲ್ಲಪ್ಪ ಹೂಲಿ ಸೇರಿದಂತೆ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ ಹಾಗು ವೀರಭದ್ರೇಶ್ವರ ಕಾರ್ತಿಕೋತ್ಸವ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.




**ಬೆಂಗಳೂರು : ಕರ್ನಾಟಕ ವಿದ್ಯುತ್ ಇಂಜಿನೀಯರ್‌ಗಳ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಸುವರ್ಣ ಮಹೋತ್ಸವ ಸ್ಮರಣಾರ್ಥ ಉಪನ್ಯಾಸದಲ್ಲಿ 2024 ನೇ ಸಾಲಿನ ತಾಂತ್ರಿಕ ಡೈರಿಯನ್ನು ಬಿಡುಗಡೆಗೊಳಿಸಲಾಯಿತು. ಈ ಸಂಧರ್ಭದಲ್ಲಿ ಇಸ್ರೋ ಮಾಜಿ ಅಧ್ಯಕ್ಷರು ಹಾಗೂ ಪದ್ಮಶ್ರೀ ಪುರಸ್ಕೃತ ಖ್ಯಾತ ವಿಜ್ಞಾನ ಎ.ಎಸ್ ಕಿರಣ್ ಕುಮಾರ್, ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಇಂಧನ ಇಲಾಖೆ ಗೌರವ್ ಗುಪ್ತಾ, ಕೆಇಬಿ ಇಂಜಿನೀಯರುಗಳ ಸಂಘದ ಅಧ್ಯಕ್ಷರಾದ ಕೆ. ಶಿವಣ್ಣ, ಪ್ರಧಾನ ಕಾರ್ಯದರ್ಶಿಗಳಾದ ಟಿ.ಎನ್ ಸುಧಾಕರ ರೆಡ್ಡಿ ಉಪಸ್ಥಿತರಿದ್ದರು.**

ವಿಶೇಷ ಲೇಖನ

# ರಾಷ್ಟ್ರೀಯ ಗ್ರಾಹಕರ ಹಕ್ಕುಗಳ ದಿನಾಚರಣೆ

ಬಾಗಲಕೋಟೆ : ಪ್ರತಿ ವರ್ಷ ಡಿ.24 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನು ಭಾರತದಾದಂತ್ಯ ಆಚರಿಸಲಾಗುತ್ತಿದೆ. ಈ ದಿನದ ಇತಿಹಾಸವು ಆಸಕ್ತಿದಾಯಕವಾಗಿದೆ. ಗ್ರಾಹಕ ಸಂರಕ್ಷಣೆ ಕಾಯ್ದೆ 1986 ಡಿಸೆಂಬರ 24, 1986 ರಂದು ರಾಷ್ಟ್ರಪತಿಯವರ ಮುದ್ರೆ ಹೊಂದಿ ಹಕ್ಕುಗಳ ದಿನ ಅಂತಾ ಆಚರಿಸಲು ಪ್ರಾರಂಭವಾಯಿತು. ಪ್ರತಿ ವರ್ಷ ಬೇರೆ ಬೇರೆ ವಿಷಯಗಳೊಂದಿಗೆ ಆಯೋಜಿಸಲಾಗುವುದು. 2021 ರಲ್ಲಿ ಕಂಜೂಮರ್ ನವ್ ಯುವರ್ ರೈಟ್ಸ್, 2022ರಲ್ಲಿ ಫೇರ್ ಡಿಜಿಟಲ್ ಫೈನಾನ್ಸ್ ಹಾಗೂ 2023 ರಲ್ಲಿ ಜಾಗೋ ಗ್ರಾಹಕ ಜಾಗೋ ಎಂಬ ಥೀಮ್‌ನೊಂದಿಗೆ ಆಚರಿಸಲಾಗುತ್ತಿತ್ತು. ಗ್ರಾಹಕರ ಆಯೋಗಗಳಲ್ಲಿ ಪರಿಣಾಮಕಾರಿಯಾಗಿ ಪ್ರಕರಣಗಳ ಇತ್ಯರ್ಥ ಗ್ರಾಹಕರ ಹಕ್ಕುಗಳು ಮತ್ತು ಅಗತ್ಯತೆಗಳ ಬಗ್ಗೆ ಜಾಗೃತಿ ಮೂಡಿಸುವ ಸುದುದ್ದೇಶದಿಂದ ರಾಷ್ಟ್ರದ್ಯಾಂತ



ವಸ್ತುಗಳನ್ನು ಸೇರು, ಪಾವು ಮತ್ತು ತಕ್ಕಡಿಗಳಿಂದ ಅಳೆದು ಮಾರಾಟ ಮಾಡುವ ಕಾಲದಿಂದ ಹಿಡಿದು, ಡಿಜಿಟಲ್ ಮಾಪನಗಳಿಂದ ಅಳತೆ ಮಾಡುವ ಈ ಕಾಲದವರೆಗೂ ಗ್ರಾಹಕರು ಒಂದಲ್ಲ ಒಂದು ರೀತಿಯಲ್ಲಿ ಮೋಸ ಹೋಗುತ್ತಿದಾರೆ. ಹೆಚ್ಚಿನ ಗ್ರಾಹಕರು ತಮ್ಮ ಹಕ್ಕುಗಳ ಬಗ್ಗೆ ತಿಳಿದಿರುವದಿಲ್ಲ. ಕಾರಣ ಈ ದಿನವನ್ನು ಆಚರಿಸುವ ಮೂಲಕ ಗ್ರಾಹಕರು ರಕ್ಷಣೆಯನ್ನು ಕೋರುವ ಹಕ್ಕಿನ ಬಗ್ಗೆ ಅರಿವು ಮೂಡಿಸಲಾಗುವುದು. ಗ್ರಾಹಕರು ಹಕ್ಕುಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಏಕೆಂದರೆ ಗ್ರಾಹಕರ ಹಕ್ಕುಗಳನ್ನು ಗ್ರಾಹಕರು ತಿಳಿದಿದ್ದರೆ ಮಾತ್ರ ಮೂಖರ್ರಾಗುತ್ತಿದ್ದೇವೆಯೋ ಇಲ್ಲವೆ ಮೋಸ ಹೋಗುತ್ತಿದ್ದೇವೆಯೋ ಎಂದು ಗುರುತಿಸಬಹುದು. ಗ್ರಾಹಕರ ಹಕ್ಕಿಗೆ ವಿರುದ್ಧವಾಗಿ ಯಾವುದೇ ಉತ್ಪನ್ನ ಅಥವಾ ಸೇವೆ, ಖರೀದಿಯ ವಿರುದ್ಧ ಗ್ರಾಹಕರು ಧ್ವನಿ ಎತ್ತಬಹುದು ಮತ್ತು ಕಾನೂನು ಕ್ರಮ ತೆಗೆದುಕೊಳ್ಳಬಹುದು.

1986 ರಲ್ಲಿ ಗ್ರಾಹಕರ ಹಿತರಕ್ಷಣಾ ಕಾಯ್ದೆ ಜಾರಿಗೆ ತಂದಾಗ ಆನ್-ಲೈನ್ ಮಾರುಕಟ್ಟೆ ಆಗ ನೇರ ಮಾರುಕಟ್ಟೆ ಇತ್ತು. ಇತ್ತೀಚಿನ ವರ್ಷಗಳಲ್ಲಿ ಆನ್-ಲೈನ್ ಮಾರುಕಟ್ಟೆ ಬಂದಿದೆ. ಆ ಕಾಯ್ದೆಯ ನ್ಯೂನ್ಯತೆಯನ್ನು ಸರಿಪಡಿಸುವ ಉದ್ದೇಶದಿಂದ 2019 ರಲ್ಲಿ ಗ್ರಾಹಕರ ಸಂರಕ್ಷಣಾ ಕಾಯ್ದೆಯನ್ನು ತಂದಿದ್ದು, 2020 ರಲ್ಲಿ ಜಾರಿಗೆ ತರಲಾಗಿದೆ.

ರಾಜ್ಯದಲ್ಲಿ ಬಡ್ಡಿದರ ಇಳಿಸಲು ಮಾರ್ಗಸೂಚಿ ಇದೆ, ಮಾರ್ಗಸೂಚಿಯಲ್ಲಿ ಇಷ್ಟೆ ಬಡ್ಡಿ ಎಂದು ಹೇಳಲಾಗಿದೆ. ಹೆಚ್ಚಿನ ಬಡ್ಡಿ ಪಡೆದ ಪ್ರಕರಣಗಳಲ್ಲಿ ಲೇವಾದೇವಿ, ಗಿರವಿ ಅಂಗಡಿಗಳಿಗೆ ಸಂಬಂಧಿಸಿದ್ದಾದರೆ ಗ್ರಾಹಕರ ಆಯೋಗದಲ್ಲಿ ನ್ಯಾಯ ಕೋರಬಹುದು. ಹಣ ಪಾವತಿ ಮಾಡಿ ಖರೀದಿಸಿದ ಯಾವುದೇ ವಸ್ತು ಅಥವಾ ಸೇವೆಯಲ್ಲಿ ಲೋಪದೋಷಗಳು ಇದ್ದರೆ ಅದನ್ನು ಪ್ರಶ್ನಿಸುವ ಅಧಿಕಾರ ಗ್ರಾಹಕರಿಗೆ ಕೊಡಲಾಗಿದೆ. ಗ್ರಾಹಕರ ಸಂರಕ್ಷಣಾ ಕಾಯ್ದೆ ಜ್ಯಾರಿಯಿಂದ ಶೋಷಣೆ ಕಡಿಮೆಯಾಗುತ್ತದೆ. ಸೇವೆಯಲ್ಲಿ ಲೋಪ ಕಂಡುಬಂದರೆ, ತಯಾರಕರು ಅಥವಾ ಮಾರಾಟಗಾರರ ವಿರುದ್ಧ ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಳಿಗೆ ದೂರು ಸಲ್ಲಿಸಿ ಪರಿಹಾರ ಪಡೆಯಬಹುದು.

ಗ್ರಾಹಕರು ಖುದ್ದಾಗಿ ತಾವೇ ತಮ್ಮ ಸಮಸ್ಯೆಗಳ ಕುರಿತು ಆಯೋಗಕ್ಕೆ ದೂರು ನೀಡಿ ಪಡೆಯಬಹುದು. ಮೂಲಕವೇ ದೂರು ಸಲ್ಲಿಸಿ ಪ್ರಕರಣ ಬಗೆಹರಿಸಿಕೊಳ್ಳಬೇಕೆಂಬ ನಿಯಮವೇನು ಇಲ್ಲ. ಸಿ.ಪಿ.ಸಿ ಯಲ್ಲಿ ಇರುವ ಕಠಿಣ ನಿಯಮವಾಗಲಿ. ಸಾಕ್ಷಾಧಾರ ಕಾಯ್ದೆ ನಿಯಮಗಳನ್ನು ಸಂಪೂರ್ಣವಾಗಿ ಅನುಸರಿಸಬೇಕಾಗಿಲ್ಲ. ಆಯೋಗಗಳಿಗೆ ಅವುಗಳದೆ ಆದ ಅಧಿಕಾರ ಹಾಗೂ ಸತ್ಯಾನ್ವೇಷಣೆಯ ಹಕ್ಕು ನೀಡಲಾಗಿದೆ. ಪಾಟೀಸವಾಲು ನಡೆಸುವ ಅವಶ್ಯಕತೆಯಿಲ್ಲ. ಗ್ರಾಹಕರ ಹಾಗೂ ಮಾರಾಟಗಾರರು ತಮ್ಮ ಲಿಖಿತ ಹೇಳಿಕೆಗಳನ್ನು ಪ್ರಮಾಣಪತ್ರದ ಮೂಲಕ ದಾಖಲಿಸಬಹುದಾಗಿದೆ. ಇದರಿಂದ ಗ್ರಾಹಕರಿಗೆ ಸುಲಭ ಹಾಗೂ ತ್ವರಿತವಾಗಿ ನ್ಯಾಯ ಸಿಗುತ್ತದೆ.

ಕಲಬೆರಿಕೆ. ನಕಲಿ ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ದೂರು ಹಾಗೂ ಸುಳ್ಳು ಜಾಹಿರಾತುಗಳಲ್ಲಿ ಭಾಗವಹಿಸುವ ರೂಪದರ್ಶಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನಮ್ಮ ಜನರಲ್ಲಿ ಹೇಗೋ ನಡೆಯುತ್ತದೆ ಎನ್ನುವ ರಾಜಿ ಮನೋಭಾವ ಹೆಚ್ಚಾಗಿದೆ. ಬಿಲ್ ಕೇಳದೇ ಇರುವುದು. ಚಿಲ್ಲರೆ ಪಡೆಯದೆ ಇರುವುದು ಫ್ಯಾಷನ್ ಆಗಿದೆ. ಇದರಿಂದ ಗ್ರಾಹಕರು ಶೋಷಣೆಗೆ ಒಳಗಾಗುತ್ತಾರೆ. ಕಾರಣ ವಸ್ತು ಅಥವಾ ಸೇವೆಗಳನ್ನು ಪಡೆದಾಗ ರಶೀದಿ ಪಡೆಯಬೇಕು. ಆಗ ಲೋಪ ಕಂಡುಬಂದಾಗ ಪರಿಹಾರ ಪಡೆಯಲು ಅನುಕೂಲವಾಗುತ್ತದೆ.

**ದೂರು ನೀಡುವ ಅಧಿಕಾರ :** ಕಾನೂನುಬದ್ದವಾಗಿ ನೋಂದಾಯಿಸಿಕೊಂಡ ಸಂಘ, ಕೇಂದ್ರ, ರಾಜ್ಯ ಸರ್ಕಾರಗಳು, ಕೇಂದ್ರದ ಪ್ರಾಧೀಕಾರ ಮತ್ತು ಸಾಮೂಹಿಕ ಅಧಿಕಾರ ಹೊಂದಿದ ಒಬ್ಬ ಅಥವಾ ಹೆಚ್ಚಿನ ಗ್ರಾಹಕರು, ಗ್ರಾಹಕ ಮೃತಪಟ್ಟರೆ ಅವನ ವಾರಸುದಾರರು ಇಲ್ಲವೇ ಪ್ರತಿನಿಧಿಗಳು, ಅಪ್ರಾಪ್ತ ಗ್ರಾಹಕ ಇದ್ದರೆ ಅವನ ಪಾಲಕರು ಇಲ್ಲವೇ ಕಾನೂನುಬದ್ಧ ಸಂರಕ್ಷಣಾಧಾರ ದೂರು ಸಲ್ಲಿಸುವ ಅಧಿಕಾರ ಹೊಂದಿದ್ದಾನೆ.

**ಗ್ರಾಹಕರ ಹಕ್ಕುಗಳು :** ಸರಕು ಮತ್ತು ಸೇವೆಗಳು ಮನುಷ್ಯನ ಜೀವ ಇಲ್ಲವೆ ಆಸ್ತಿಗೆ ಅಪಾಯಕಾರಿ ಇದ್ದಾಗ, ಸಂರಕ್ಷಿಸುವ ಹಕ್ಕು, ಸರಕಿನ ಗುಣಮಟ್ಟ, ಪ್ರಮಾಣ, ಪರಿಶುದ್ಧತೆ, ಬೆಲೆಯ ಬಗ್ಗೆ ಗ್ರಾಹಕನಿಗೆ ಶೋಷಣೆಯಾದಾಗ ಸಂರಕ್ಷಿಸುವ ಹಕ್ಕು ಗ್ರಾಹಕನ ಆಸಕ್ತಿ, ವಿಚಾರಣೆಯ ಹಕ್ಕು, ಶೋಷಣೆಯಾದಾಗ ಪರಿಹಾರ ಪಡೆಯುವ ತಿಳುವಳಿಕೆಯ ಹಕ್ಕುಗಳನ್ನು ಹೊಂದಿರುತ್ತಾರೆ.

**ಅಧಿಕಾರ ವ್ಯಾಪ್ತಿ :** ಸರಕುಗಳ ಮೌಲ್ಯ ಮತ್ತು ಸೇವೆಯ ನ್ಯೂನ್ಯತೆ ಬಗ್ಗೆ ಪರಿಹಾರ ಪಡೆಯಬೇಕಾದರೆ ರೂ.50 ಲಕ್ಷದವರೆಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ, ರೂ.2 ಕೋಟಿವರೆಗೆ ಪರಿಹಾರ ಪಡೆಯಲು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಮತ್ತು 2 ಕೋಟಿಗಿಂತ ಹೆಚ್ಚಿಗೆ ಪರಿಹಾರ ಪಡೆಯಬೇಕಾದರೆ ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿ ಪರಿಹಾರ ಪಡೆಯುವ ವ್ಯಾಪ್ತಿ ಇರುತ್ತದೆ. ಆಯೋಗಗಳಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬ ಪುರುಷ ಸದಸ್ಯ ಮತ್ತು ಒಬ್ಬ ಮಹಿಳಾ ಸದಸ್ಯಣಿ ಕಾರ್ಯ ನಿರ್ವಹಿಸುತ್ತಾರೆ.

ಗ್ರಾಹಕ ಆಯೋಗ ದೂರನ್ನು ಸ್ವೀಕರಿಸಿದ 21 ದಿನಗಳಲ್ಲಿ ದೂರನ್ನು ಸ್ವೀಕರಿಸುವ ಬಗ್ಗೆ ನಿರ್ಣಹಿಸಬೇಕಾಗುತ್ತದೆ. ನೋಟೀಸ್ ಜ್ಯಾರಿಯಾದ 45 ದಿನಗಳಲ್ಲಿ ಎದುರುಪಕ್ಷದವರು ತಮ್ಮ ತಕರಾರನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಒಟ್ಟಿನಲ್ಲಿ ನ್ಯಾಯಾಲಯಗಳಿಗಿಂತ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಕಡಿಮೆ ಖರ್ಚಿನಲ್ಲಿ ಮತ್ತು ಕಡಿಮೆ ವೇಳೆಯಲ್ಲಿ ಶೀಘ್ರ ನ್ಯಾಯ ಲಭಿಸುವುದರಿಂದ ಪ್ರತಿಯೊಬ್ಬ ಗ್ರಾಹಕರು ನೂತನ ಕಾಯ್ದೆಯ ಸದುಪಯೋಗ ಪಡಿಸಿಕೊಳ್ಳಲು ಮುಂದಾಗಬೇಕು.



**– ಡಿ. ವೈ. ಬಸಾಪೂರ, ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಬಾಗಲಕೋಟೆ.**

# ನೆನಪಿನಂಗಳದ ಸಾಗರದಲ್ಲಿ ಸಾಧನೆಯ ದೋಣಿ ಸಾಗಲಿ



ಹಾರೂಗೇರಿ : ಸ್ಥಳೀಯ ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಚನ್ನವೃಷಭೇಂದ್ರ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಆವರಣದಲ್ಲಿ ಜರುಗಿದ 2002-03 ನೇ ಶೈಕ್ಷಣಿಕ ಸಾಲಿನ 7 ನೇ ತರಗತಿ ಹಾಗೂ 2005-06 ನೇ ಸಾಲಿನ 10 ನೇ ತರಗತಿಯ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಸಮಾರಂಭ ಹಾಗೂ ಗುರುವಂದನ ಕಾರ್ಯಕ್ರಮವನ್ನುದ್ದೇಶಿಸಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್ ವ್ಹಿ ಈ ಎಸ್ ಪ್ರೌಢಶಾಲೆಯ ಪ್ರಧಾನಗುರುಗಳಾದ ಶ್ರೀ ಎಸ್ ಎಲ್ ಜಾಧವ ಮಾತನಾಡಿ,ಬಿಟ್ಟು ಹೋದ ಕ್ಷಣಗಳು ಮತ್ತು ಪಡೆಡಿಕೊಂಡಿರುವ ಸೌಲಭ್ಯಗಳು ಗುರುಕಾಣಿಕೆಗಳು ಅವುಗಳೊಂದಿಗೆ ನೆನಪಿನಂಗಳದ ಸಾಗರದಲ್ಲಿ ಸಾಧನೆಯ ದೋಣಿ ಸಾಗಲಿ ಎಂದು ಅತ್ಯಂತ ಮಾರ್ಮಿಕವಾಗಿ ನುಡಿದರು.ಅತಿಥಿಗಳಾಗಿ ಆಗಮಿಸಿದ್ದ ಎಚ್ ಪಿ ನಾವ್ಹಿ, ಆರ್ ಎಚ್ ಹುಲ್ಲೆನ್ನವರ, ಡಾ. ರಮೇಶ ಕಮತಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಪನಾತಾಯಿ ದರೂರ ವಹಿಸಿದ್ದರು.ಸಾಹಿತಿ ಡಾ. ವ್ಹಿ ಎಸ್ ಮಾಳಿಯವರು, ಎಸ್ ಜಿ ಕೆರಿಮನಿ, ನಿಂಬಾಳ್ಕರ, ಎ ಎಸ್ ಧರ್ಮಟ್ಟಿ, ಎ ಐ ಬಡಿಗೇರ, ಎ ಎಸ್ ಧರ್ಮಟ್ಟಿ ಮುಂತಾದವರು ಉಪಸ್ಥಿತರಿದ್ದರು.ಅನೇಕ ವಿದ್ಯಾರ್ಥಿಗಳು ತಮ್ಮ ಬದುಕಿನ ಹಳೆಯ ಹೂರಣದ ಸವಿರುಚಿಯನ್ನು ಉಣಬಡಿಸಿದರು.ಶಿವಾನಂದ ಮಠಪತಿ ಪ್ರಾಸ್ತವಿಕ ನುಡಿಗಳಾಡಿದರು.ಮಹಾನಂದ ಕುಂಬಾರ ಸ್ವಾಗತಿಸಿದರು.ದೀಪಾ ಪತ್ತಾರ,ಗುರು ಜಂಬಗಿ ಹಾಗೂ ದೀಪಾ ಬವಚಿ ನಿರೂಪಿಸಿದರು.ರವಿ ಗಸ್ತಿ, ಆನಂದ ಸವದಿ, ಭೀಮಪ್ಪ ಲಾಳಿ, ಶ್ರೀಕಾಂತ ಕಾಂಬಳೆ, ಸಂತೋಷ ಗಸ್ತಿ, ಗಜಾನನ ಸವದಿ ಮುಂತಾದವರು ಕಾರ್ಯಕ್ರಮ ಆಯೋಜಿಸಿದ್ದರು.

ವರದಿ : ಸುನೀಲ್ ಕಬ್ಬೂರ

# ಲಿಂಗರಾಜು ನೊಣವಿನಕೆರೆಗೆ 2023 ನೇ ಸಾಲಿನ ಪ್ರೆಸ್ ಕ್ಲಬ್ ಪ್ರಶಸ್ತಿ



ಬೆಂಗಳೂರು : ಕಳೆದ ಮೂರು ದಶಕಗಳ ಕಾಲ ಪತ್ರಿಕೋದ್ಯಮದಲ್ಲಿ ತಮ್ಮದೇ ಆದ ಛಾಪೂ ಮೂಡಿಸುವ ಮೂಲಕ ಪತ್ರಿಕಾ ರಂಗದ ಭೀಷ್ಮ ಎನಿಸಿರುವ ಬೆಂಗಳೂರಿನ ಪತ್ರಕರ್ತ ಲಿಂಗರಾಜು ಡಿ ನೊಣವಿನಕೆರೆಯವರು 2023 ನೇ ಸಾಲಿನ ಪ್ರೆಸ್ ಕ್ಲಬ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ತಮ್ಮದೇ ಸಂಪಾದಕತ್ವದ ಪ್ರೆಸೆಂಟ್ ಪಾಲಿಟಿಕ್ಸ್ ದಿನ ಪತ್ರಿಕೆ ಹಾಗೂ ನೇಕಾರ ವಾಣಿ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದೆಷ್ಟೋ ಪತ್ರಕರ್ತರಿಗೆ ಕೆಲಸವನ್ನು ಕೊಟ್ಟು ಅವರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸಂಪಾದಕ ಲಿಂಗರಾಜುರವರು ಕಳೆದ ಮೂವತ್ತು ವರ್ಷಗಳಿಂದ ಸುದ್ದಿ ವಾಹಿನಿ ಹಾಗೂ ನಾಡಿನ ಅನೇಕ ಪತ್ರಿಕೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುವುದರೊಂದಿಗೆ ಸಮಾಜಕ್ಕೆ ನೈಜ ವರದಿಗಳ ಮೂಲಕ ಬಡವರ, ದಿನ ದಲಿತರ, ಶೋಷಿತರ ಹಾಗೂ ಸಾಂಸ್ಕೃತಿಕ ಲೋಕಕ್ಕೆ

ಸಂಬಂಧಿಸಿದ ವರದಿಗಳನ್ನು ಮಾಡುವುದರೊಂದಿಗೆ ಜನ ಮೆಚ್ಚುಗೆ ಗಳಿಸಿದ್ದಾರೆ. ಅಷ್ಟೇ ಅಲ್ಲದೆ ರಾಜ್ಯದ ನೇಕಾರ ಸಮುದಾಯದ ಕಷ್ಟ ಕಾರ್ಪಣ್ಯಗಳನ್ನು ತಮ್ಮ ಬರವಣಿಗೆಯ ಮೂಲಕ ತಿಳಿಸಲು ನೇಕಾರ ವಾಣಿ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದಾರೆ. ಇದರಿಂದ ತಮ್ಮ ಬರವಣಿಗೆಯ ಮೂಲಕ ನೇಕಾರರ ಕುರಿತು ಸರ್ಕಾರದ ಗಮನ ಸೆಳೆದಿದ್ದಾರೆ. ಇದೀಗ ತಮ್ಮದೆಯಾದ ಸಂಪಾದಕತ್ವದಲ್ಲಿ ಪ್ರೆಸೆಂಟ್ ಪಾಲಿಟಿಕ್ಸ್ ದಿನ ಪತ್ರಿಕೆಯನ್ನು ನಡೆಸುತ್ತಿದ್ದಾರೆ. ಸದ್ಯ ನೇಕಾರವಾಣಿ ಪತ್ರಿಕೆ ಹಾಗೂ ಪ್ರೆಸೆಂಟ್ ಪಾಲಿಟಿಕ್ಸ್ ದಿನ ಪತ್ರಿಕೆ ಜನ ಮೆಚ್ಚುಗೆ ಗಳಿಸಿರುವುದು ಹೆಮ್ಮೆಯ ವಿಷಯವಾಗಿದೆ. ಅಷ್ಟೇ ಅಲ್ಲದೆ ಕಳೆದ ವರ್ಷ ತಮ್ಮ ಸಂಪಾದಕತ್ವದ ನೇಕಾರ ವಾಣಿ ಪತ್ರಿಕೆಯ ಹದಿನೈದನೇ ವಾರ್ಷಿಕೋತ್ಸವ ಆಚರಿಸುವ ಮೂಲಕ ಪತ್ರಿಕೆಯನ್ನು ನಿರಂತರವಾಗಿ ನಡೆಸಿರುವ ಖ್ಯಾತಿ ಹೊಂದಿದ್ದಾರೆ. ಇಂತಹ ಪತ್ರಿಕಾ ರಂಗದ ಸಾಧಕನಿಗೆ ಡಿಸೆಂಬರ್ 31 ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಇವರಿಗೆ ಪ್ರಶಸ್ತಿ ಲಭಿಸಿದ್ದು ನಿಜಕ್ಕೂ ಪ್ರಶಸ್ತಿಯ ಮೌಲ್ಯ ಹೆಚ್ಚಿಸಿದಂತಾಗಿದೆ.

# ಯಾದವಾಡ ಪರಿವಾರದ ಸಹೋದರರ ಕಾರ್ಯ ಶ್ಲಾಘನೀಯ: ಶಿವಾನಂದ ಶೆಲ್ಲಿಕೇರಿ



ಲೋಕಾಪುರ : ವ್ಯಾಪಾರ, ಕೃಷಿ , ಉದ್ದಿಮೆ ಹಾಗೂ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಯಾದವಾಡ ಪರಿವಾರದ ಸಹೋದರರ ಕಾರ್ಯ ಶ್ಲಾಘನೀಯವಾದದ್ದು ಎಂದು ಬಾಗಲಕೋಟೆ ಜಿಲ್ಲಾ ಕನ್ನಡಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಸಮೀಪದ ಬಟಕುರ್ಕಿ ಗ್ರಾಮದ ಶೇಖರಪ್ಪಯಾದವಾಡ ಅವರ ನಿವಾಸದಲ್ಲಿ ಶೇಖರಪ್ಪಯಾದವಾಡದಂಪತಿಗಳಿಗೆ ಸನ್ಮಾನಿಸಿ ಮಾತನಾಡಿದ ಅವರು ಇತ್ತಿಚಿಗೆ ಬಾದಾಮಿಯಲ್ಲಿ ಜರುಗಿದ ಸಾಂಸ್ಕೃತಿಕ ಸಮ್ಮೇಳನದಲ್ಲಿ ಕನ್ನಡಶ್ರೀ ಪ್ರಶಸ್ತಿ ಸ್ವೀಕರಿಸಲು ಅನಾರೋಗ್ಯದಕಾರಣದಿಂದ ಕಾರ್ಯಕ್ರಮಕ್ಕೆ ಆಗಮಿಸದಿದ್ದಕ್ಕೆ ಕಸಾಪ ಪದಾಧಿಕಾರಿಗಳು ಸೇರಿ ಯಾದವಾಡ ಅವರ ಸ್ವಗೃಹಕ್ಕೆ ತೆರಳಿ ದಂಪತಿಗೆ ಸನ್ಮಾನಿಸಲಾಯಿತು ಎಂದು ತಿಳಿಸಿದರು.

ಧನಲಕ್ಷ್ಮೀ ಸಹಕಾರಿ ಸಕ್ಕರೆಕಾರ್ಖಾನೆ ಅಧ್ಯಕ್ಷ ಮಲ್ಲಣ್ಣ ಯಾದವಾಡ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತುಸಮಾಜದಲ್ಲಿ ಉತ್ತಮ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಪರಿಷತ್ತಿನ ಎಲ್ಲಾ ಚಟುವಟಿಕೆಗಳಿಗೆ ನಮ್ಮ ಸಹಕಾರ ಇರುತ್ತದೆಎಂದು ಹೇಳಿದರು.

ಈ ವೇಳೆ ಹಿರಿಯ ವೈದ್ಯ ಡಾ। ವಿ.ವಿ. ಗಾಣಿಗೇರ, ಡಾ। ಮಹೇಶಮಠಪತಿ, ಗ್ರಾಪಂ ಅಧ್ಯಕ್ಷ ಹಣಮಂತ ಲಕ್ಕನ್ನವರ, ಮುಧೋಳತಾಲೂಕಾ ಕಸಾಪ ಅಧ್ಯಕ್ಷ ಆನಂದ ಪೂಜಾರಿ, ಲೋಕಾಪುರ ವಲಯ ಕಸಾಪ ಅಧ್ಯಕ್ಷ ಎಸ್.ಎಂ. ರಾಮದುರ್ಗ, ಸಿದ್ದು ವಿರಕ್ತಮಠ, ಬಸವರಾಜ ಯಾದವಾಡ, ವಿಠ್ಠಲ ಮೇಟಿ, ಈಶ್ವರಮುದ್ದಾಪೂರಹಾಗೂ ಯಾದವಾಡಕುಟುಂಬದ ಸದಸ್ಯರು ಇದ್ದರು.

# ಬಾಲ್ಯ ವಿವಾಹ ಪ್ರಕರಣಗಳಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ: ತಹಶೀಲ್ದಾರ ವಿಠ್ಠಲ್ ಚೌಗಲಾ



ಕೊಪ್ಪಳ : ಬಾಲ್ಯ ವಿವಾಹ ತಡೆಗಟ್ಟುವಲ್ಲಿ ರಚಿಸಲಾದ ತಾಲ್ಲೂಕು ಮಟ್ಟದ ಸಮಿತಿಯ ಎಲ್ಲ ಸದಸ್ಯರು, ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ತಹಶೀಲ್ದಾರ ವಿಠ್ಠಲ್ ಚೌಗಲಾ ಅವರು ತಿಳಿಸಿದರು.

ಬುಧವಾರದಂದು ಬಾಲ್ಯ ವಿವಾಹಗಳನ್ನು ತಡೆಯುವ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಿತಿ ಸಭೆಗಳಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಪ್ರತಿನಿಧಿಗಳನ್ನು ಸಭೆಗೆ ನಿಯೋಜಿಸದೆ ಖುದ್ದಾಗಿ ಅಧಿಕಾರಿಗಳೇ ಹಾಜರಿರಬೇಕು. ಇದರಿಂದ ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು, ಪರಸ್ಪರ ಸಮನ್ವಯ ಸಾಧನೆ ಮುಂತಾದವುಗಳ ಕುರಿತು ಎಲ್ಲರಿಗೂ ಸೂಕ್ತ ಮಾಹಿತಿ ದೊರೆಯುತ್ತದೆ. ಅಧಿಕಾರಿ, ಸಮಿತಿ ಸದಸ್ಯರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್ ಮಾತನಾಡಿ, 2023-24 ರಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಸ್ವೀಕರಿಸಿದ ದೂರುಗಳು ಮತ್ತು ತಡೆಹಿಡಿದ ಮಾಹಿತಿಗಳನ್ನು ತಿಳಿಸಿದರು. ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ 3 ತಿಂಗಳಿಗೊಮ್ಮೆ ಮಹಿಳೆ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಸಭೆಯನ್ನು ನಡೆಸಲು ತಿಳಿಸಿದಂತೆ, ಜನವರಿ-2024ರ ಮಾಹೆಯಲ್ಲಿ ಎಲ್ಲಾ ಪಂಚಾಯತಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಸಭೆಯನ್ನು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಸಭೆ ನಡೆಸಿ ಜಿಪಿಎಸ್ ಫೋಟೋ ಮತ್ತು ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಲು ಸೂಚಿಸಿದರು. ಬಾಲ್ಯವಿವಾಹ ತಡೆದ ಅನುಸರಣಾ ಭೇಟಿಯ ವರದಿಯನ್ನು ನಿಗದಿಪಡಿಸಿರುವ ಎಲ್ಲಾ ಇಲಾಖೆಯವರು ಭೇಟಿ ಮಾಡಿ ವರದಿಯನ್ನು ತಪ್ಪದೇ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಬೇಕು ಎಂದು ಹೇಳಿದರು.

ಸೀಡ್ಸ್, ಹೋಟೆಲ್, ಇಟ್ಟಂಗಿಬಟ್ಟಿ, ಉಸುಕು ವ್ಯಾಪಾರ, ಕೋಳಿಫಾರಂ ಮುಂತಾದೆಡೆ ಬಾಲಕಾರ್ಮಿಕರು ದುಡಿಯುತ್ತಿದ್ದು, ಕೈಗಾರಿಕೆಗಳಲ್ಲಿ ನಿಯೋಜಿತ ಅಧಿಕಾರಿಗಳು ಭೇಟಿ ನೀಡಿ ವರದಿ ಕೊಡಬೇಕು. ಬಾಲಕಾರ್ಮಿಕರು,

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಬೇಕು. ಮುಂಬರುವ ಜನವರಿ-2024ರ ತಿಂಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯೋಜಿಸುವ ಗ್ರಾಮ ಪಂಚಾಯತಿಗಳು ಮುಖ್ಯವಾಗಿ ಸಭೆಗೆ ಪ್ರೌಢಶಾಲಾ ಮಕ್ಕಳನ್ನು ಹಾಜರಿರುವಂತೆ ನೋಡಿಕೊಳ್ಳಬೇಕು. ಬಾಲ್ಯವಿವಾಹ ಹೆಚ್ಚಾಗಿ ಕಂಡುಬರುವ ಸೂಕ್ಷ?ಮ ಪ್ರದೇಶಗಳನ್ನು ಗುರುತಿಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸಾಮೂಹಿಕ ವಿವಾಹಗಳ ಆಯೋಜಕರು ಕಡ್ಡಾಯವಾಗಿ ಅಧ್ಯಕ್ಷರು/ತಹಶೀಲ್ದಾರರ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ವಧು-ವರರ ವಯಸ್ಸಿನ ದಾಖಲೆಗಳನ್ನು ನಿಗದಿತ ಸಮಯದಲ್ಲಿ ನೀಡತಕ್ಕದ್ದು. ಸಾಮೂಹಿಕ

ವಿವಾಹಗಳ ಆಯೋಜಕರು ಸಂಸ್ಥೆ/ಕಮಿಟಿಯನ್ನು ಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ ಮತ್ತು ನಗರಸಭೆ ಸಿಬ್ಬಂದಿಗಳು, ಮೇಲ್ವಿಚಾರಕಿಯರು, ಮಕ್ಕಳ ಸಹಾಯವಾಣಿ-1098 ಕೊಪ್ಪಳ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.

# ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಅತ್ಯಾಧುನಿಕ ಖಗೋಳ ವಿಜ್ಞಾನ ಪ್ರಯೋಗಾಲಯ ಉದ್ಘಾಟಿಸಿದ ಸಚಿವ ರಾಮಲಿಂಗಾರೆಡ್ಡಿ



ಬೆಂಗಳೂರು : ಬ್ರಿಲಿಯೊದ CSR ಅಂಗವಾದ STEM ಲರ್ನಿಂಗ್ ಮತ್ತು ಬ್ರಿಂಗಿಂಗ್ ಸ್ಮೈಲ್ಸ್ ಫೌಂಡೇಶನ್ ನಡುವಿನ ಸಹಯೋಗದೊಂದಿಗೆ ಆಡುಗೋಡಿಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್ ತನ್ನ ಅತ್ಯಾಧುನಿಕ ಖಗೋಳ ವಿಜ್ಞಾನ ಲ್ಯಾಬ್ ನ ಉದ್ಘಾಟನೆಯನ್ನು ಮಾಡಲಾಯಿತು. ಈ ಅತ್ಯಾಧುನಿಕ ಸೌಲಭ್ಯವು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಖಗೋಳಶಾಸ್ತ್ರದ ಅದ್ಭುತಗಳನ್ನು ಪರಿಶೀಲಿಸಲು ವಿಶಿಷ್ಟವಾದ ಮತ್ತು ತೊಡಗಿಸಿಕೊಳ್ಳುವ ವೇದಿಕೆಯನ್ನು ಒದಗಿಸಲು ಸಿದ್ಧವಾಗಿದೆ.

ಈ ಕಾರ್ಯಕ್ರಮಕ್ಕೆ ಕರ್ನಾಟಕ ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಚಾಲನೆ ನೀಡಿ ಲ್ಯಾಬ್ ಅನ್ನು ಅನಾವರಣಗೊಳಿಸಿದರು. ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಭಾಗಿಯಾದರು.ಇನ್ನು ಬ್ರಿಲ್ಲಿಯೋ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ನ ಆಡಳಿತ, ಇಎಸ್ ಜಿ, ಇಹೆಚ್ ಎಸ್, ಸಿಎಸ್ ಆರ್ ಮತ್ತು ಡಿ&ಐ ಹಿರಿಯ ನಿರ್ದೇಶಕ ಮತ್ತು ಜಾಗತಿಕ ಮುಖ್ಯಸ್ಥರಾದ ಅಭಿಷೇಕ್ ರಂಜನ್ ಅವರು ವಿಶೇಷವಾಗಿ ಹಿಂದುಳಿದ ಮಕ್ಕಳಲ್ಲಿ ಖಖಇಒ ಶಿಕ್ಷಣ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಉತ್ತೇಜಿಸುವ ಪ್ರಮುಖ ಪಾತ್ರದ ಕುರಿತು ಒಳನೋಟಗಳನ್ನು ಹಂಚಿಕೊಂಡರು.

ಖಗೋಳವಿಜ್ಞಾನ ಪ್ರಯೋಗಾಲಯವು STEM ಲರ್ನಿಂಗ್‌ನ ಪ್ರಮುಖ ಕಾರ್ಯಕ್ರಮವಾದ ಮಿನಿ ಸೈನ್ಸ್ ಸೆಂಟರ್ (MSC)ನ ಅವಿಭಾಜ್ಯ ಅಂಗವಾಗಿದೆ. ಇದು ಭಾರತದಾದ್ಯಂತ 2,000 ಕ್ಕೂ ಹೆಚ್ಚು ಶಾಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿದೆ ಮತ್ತು 10 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು 4,000 ಶಿಕ್ಷಕರಿಗೆ ಸೇವೆ ಸಲ್ಲಿಸಿದೆ. ಒಖಅ ಪ್ರೋಗ್ರಾಂ ಸಂವಾದಾತ್ಮಕ ಮಾದರಿಗಳು, ಪ್ರಯೋಗಗಳು ಮತ್ತು ಶಾಲಾ ಪಠ್ಯಕ್ರಮದೊಂದಿಗೆ ಜೋಡಿಸಲಾದ ಚಾರ್ಟ್ ಗಳನ್ನು ಸಂಯೋಜಿಸುತ್ತದೆ, ಕಲಿಕೆಯನ್ನು ವಿನೋದ ಮತ್ತು ಸುಲಭಗೊಳಿಸುತ್ತದೆ.

ಇನ್ನು ಈ ಕುರಿತು ಮಾತನಾಡಿದ ಕರ್ನಾಟಕದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು'' STEM ಕಲಿಕೆಯ ಸಹಭಾಗಿತ್ವದಲ್ಲಿ ಬ್ರಿಂಗ್ ಸ್ಮೈಲ್ಸ್ ಕಾರ್ಯಕ್ರಮವು ಖಗೋಳ ವಿಜ್ಞಾನ ಲ್ಯಾಬ್ ಸ್ಥಾಪನೆಯನ್ನು ಬೆಂಬಲಿಸಿದೆ, ಬೆಂಗಳೂರಿನ ಆಡುಗೋಡಿಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್ ನಲ್ಲಿ 1000 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುತ್ತದೆ. ಈ ಕಾರ್ಯಕ್ರಮವು ಸರ್ಕಾರಿ ಶಾಲೆಗಳ ಸಹಯೋಗದೊಂದಿಗೆ ಆಕಾಶ-ವೀಕ್ಷಣೆ ಅವಧಿಗಳನ್ನು ಸಹ ಒಳಗೊಂಡಿದೆ.ಈ ರೀತಿಯ ಸಿಎಸ್‌ಆರ್ ಉಪಕ್ರಮಗಳು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (CSR)ನಲ್ಲಿ ತೊಡಗಿರುವ ಕಂಪನಿಗಳಿಂದ ನಿರಂತರ ಬೆಂಬಲಕ್ಕೆ ಅರ್ಹವಾಗಿದೆ. ಏಕೆಂದರೆ ಅವರು ಶಿಕ್ಷಣವನ್ನು ಮುಂದುವರೆಸುವಲ್ಲಿ ಮತ್ತು ಅರ್ಥಪೂರ್ಣ ಪರಿಣಾಮವನ್ನು ಉಂಟುಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ" ಎಂದು ಹೇಳಿದರು.

ESG, EHS, CSR, ಮತ್ತು D&I ನ ಹಿರಿಯ ನಿರ್ದೇಶಕರು ಮತ್ತು ಗ್ಲೋಬಲ್ ಹೆಡ್, ಬ್ರಿಲಿಯೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಅಭಿಷೇಕ್ ರಂಜನ್ ಅವರು ಮಾತನಾಡುತ್ತಾ, ''ಈ ಅಸಾಧಾರಣ ಸೌಲಭ್ಯವನ್ನು ಆಯೋಜಿಸಲು ನಮಗೆ ಗೌರವವಿದೆ, ಇದು STEM ಸಹಯೋಗದಿಂದ ಸಾಧ್ಯವಾಗಿದೆ. ಕಲಿಕೆಯ ಸಾಮಾಜಿಕ ಉದ್ಯಮ. ಈ ಖಗೋಳ ಶಾಸ್ತ್ರ ಪ್ರಯೋಗಾಲಯವು ನಮ್ಮ ವಿದ್ಯಾರ್ಥಿಗೆ ಸಮಗ್ರ ಮತ್ತು ಸಮೃದ್ಧ ಕಲಿಕೆಯ ಅನುಭವವನ್ನು ಒದಗಿಸುವ ನಮ್ಮ ಬದ್ಧತೆಯೊಂದಿಗೆ ಮನಬಂದಂತೆ ಹೊಂದಾಣಿಕೆ ಮಾಡುತ್ತದೆ" ಎಂದರು.

STEM ಲರ್ನಿಂಗ್ ನ ಸಂಸ್ಥಾಪಕರಾದ ಅಶುತೋಷ್ ಪಂಡಿತ್, ಅವರು ಮಾತನಾಡುತ್ತಾ "STEM ಕಲಿಕೆಯಲ್ಲಿ, ಕರ್ನಾಟಕ ಪಬ್ಲಿಕ್ ಸ್ಕೂಲ್ ಮತ್ತು ಬ್ರಿಲಿಯೊ ಜೊತೆಗಿನ ಈ ಉತ್ತೇಜಕ ಉಪಕ್ರಮದ ಭಾಗವಾಗಲು ನಮಗೆ ತುಂಬಾ ಸಂತೋಷವಾಗಿದೆ.

ಖಗೋಳಶಾಸ್ತ್ರ ಪ್ರಯೋಗಾಲಯವು ವಿಜ್ಞಾನ ಶಿಕ್ಷಣವನ್ನು ಪ್ರವೇಶಿಸಲು, ಸಂವಾದಾತ್ಮಕವಾಗಿ ಮತ್ತು ವಿದ್ಯಾರ್ಥಿಗಳಿಗೆ ಆನಂದದಾಯಕವಾಗಿಸುವ ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ. ಇದು ಖಖಇಒ ಶಿಕ್ಷಣವನ್ನು ಪರಿವರ್ತಿಸುವ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಅದ್ಭುತಗಳನ್ನು ಅಳವಡಿಸಿಕೊಳ್ಳಲು ಯುವಕರನ್ನು ಸಶಕ್ತಗೊಳಿಸುವ ನಮ್ಮ ಧ್ಯೇಯದೊಂದಿಗೆ ಕೂಡಿದೆ" ಎಂದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS,** Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State